بِسۡمِ اللّٰہِ الرَّحۡمٰنِ الرَّحِیۡمِ　نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ　وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 01

ಸಂಚಿಕೆ: 27

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

16 ಜುಲೈ 2020, 16 ವಫಾ 1399 ಹಿಜರಿ ಶಮ್ಸಿ,
24 ಝುಲ್-ಖಅದಃ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ

## ಅಲ್ಲಾಹನ ಉಪದೇಶ

وَلَیۡسَتِ التَّوۡبَۃُ لِلَّذِیۡنَ یَعۡمَلُوۡنَ السَّیِّاٰتِ ۚ حَتّٰۤی اِذَا حَضَرَ اَحَدَھُمُ الۡمَوۡتُ قَالَ اِنِّیۡ تُبۡتُ الۡـٰٔنَ وَلَا الَّذِیۡنَ یَمُوۡتُوۡنَ وَھُمۡ کُفَّارٌ ؕ (النساء:19)

*(ಅನ್ನಿಸಾಅ್:18)*

ಅಂದರೆ: ದುಷ್ಕೃತ್ಯ ಮಾಡುತ್ತಲೇ ಇದ್ದು ಮರಣ ಸಮೀಪಿಸುವಾಗ, 'ನಾನೀಗ ಪಶ್ಚಾತ್ತಾಪಪಡುತ್ತೇನೆ' ಎಂದು ಹೇಳುವವರ ಮತ್ತು ಅವಿಶ್ವಾಸಿಗಳಾಗಿ ಮರಣ ಪಡುವವರ ಪಶ್ಚಾತ್ತಾಪ ಸ್ವೀಕರಿಸಲ್ಪಡದು.ಅವರಿಗೆ ನಾವು ಯಾತನಾಮಯ ಶಿಕ್ಷೆಯನ್ನು ಸಿದ್ಧಪಡಿಸಿ ಇಟ್ಟಿದ್ದೇವೆ.

**ಯಾರು ಇಸ್ಲಾಮಿನ ಬಗ್ಗೆ ಗೌರವ ಮತ್ತು ಹೆಮ್ಮೆ ಪಡುವುದಿಲ್ಲವೋ ಅವನು ಯಾರೇ ಆಗಲಿ ಅಲ್ಲಾಹನು ಅವನ ಗೌರವ ಹಾಗೂ ಹೆಮ್ಮೆಯ ಕುರಿತು ಲೆಕ್ಕಿಸುವುದಿಲ್ಲ. ಹಾಗಾಗಿ ಅವನನ್ನು ಧರ್ಮಭಿಮಾನಿ ಮುಸಲ್ಮಾನ್ ಎನ್ನಲಾಗುವುದಿಲ್ಲ.**

---

**ಅಲ್ಲಾಹನ ಮಾತುಗಳನ್ನು ಹಗುರವಾಗಿ ಪರಿಗಣಿಸಬೇಡಿ. ದ್ವೇಷಭಾವದಿಂದ ಸತ್ಯವನ್ನು ತಿರಸ್ಕರಿಸದವರನ್ನು ಮತ್ತು ಶಾಂತಿಯ ಕಾಲದಲ್ಲಿ ಯಾರೊಬ್ಬರ ಆಗಮನದ ಅಗತ್ಯವಿದೆ ಎನ್ನುವವರನ್ನು ಕರುಣಾರ್ಹರೆಂದು ಭಾವಿಸಿರಿ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಅಹ್ಮದಿಯತ್ತಿನ ಮೂಲಕ ಇಸ್ಲಾಮಿನ ರಕ್ಷಣೆ:

ಪ್ರಸ್ತುತ ಕಾಲದಲ್ಲಿ ಇಸ್ಲಾಮಿನ ಮೇಲೆ ಅಸ್‌ಹಾಬುಲ್‌ಫೀಲ್ (ಆನೆಯ ಜನರ) ರೀತಿಯಲ್ಲಿ ಆಕ್ರಮಣ ಮಾಡಲಾಗಿದೆ. ಮುಸಲ್ಮಾನರ ಸ್ಥಿತಿ ತುಂಬ ಶೋಚನೀಯವಾಗಿದೆ. ಇಸ್ಲಾಮ್ ದುರ್ಬಲಗೊಂಡಿದೆ ಮತ್ತು ಅಸ್‌ಹಾಬುಲ್ ಫೀಲ್ ಬಲಯುತವಾಗಿದೆ. ಆದರೆ ಅಲ್ಲಾಹನು ಮತ್ತೆ ಅದೇ ಮಾದರಿಯಲ್ಲಿ, ಅಂದರೆ ಪಕ್ಷಿಗಳಿಂದ (ಗುಬ್ಬಚ್ಚಿಗಳಿಂದ) ಕಾರ್ಯ ಮಾಡಬಯಸುತ್ತಾನೆ. ಅವರ ಎದುರಿನಲ್ಲಿ ನಮ್ಮ ಜಮಾಅತ್ತಿನ ತಾಕತ್ತಾದರೂ ಏನು? ಅವರ ಒಗ್ಗಟ್ಟು, ಶಕ್ತಿ ಮತ್ತು ಸಂಪತ್ತಿನ ಮುಂದೆ ಹೆಸರಿನ ಯೋಗ್ಯತೆಯೂ ನಮಗಿಲ್ಲ. ಆದರೆ ನಾವು ಅಸ್‌ಹಾಬುಲ್ ಫೀಲ್ (ಆನೆಯ ಜನರ) ಘಟನೆಯನ್ನು ಮುಂದಿಡುತ್ತಿದ್ದೇವೆ. ಅಲ್ಲಾಹನು ಎಂತಹ ಸಮಾಧಾನದ ವಚನಗಳನ್ನು ಅವತರಿಸಿದ್ದಾನೆ! ನನಗೂ ಅದೇ ದೇವವಾಣಿಯಾಗಿದೆ. ಅದರಿಂದ ಸ್ಪಷ್ಟವಾಗುವುದೇನೆಂದರೆ ಅಲ್ಲಾಹನ ಪುಷ್ಟಿ ಮತ್ತು ಸಹಕಾರ ದೊರೆಯುವುದು. ಹೌದು, ಖುರ್‌ಆನ್‌ನಿನ ಮೇಲೆ ಪ್ರೀತಿಯುಳ್ಳವರು ಮಾತ್ರ ಭರವಸೆಯನ್ನು ಹೊಂದುತ್ತಾರೆ. ಖುರ್‌ಆನಿನ ಮೇಲೆ ಪ್ರೀತಿ ಇಲ್ಲದವರು, ಇಸ್ಲಾಮಿನ ಮೇಲೆ ಹೆಮ್ಮೆ ಪಡದವರು, ಇಂತಹ ಮಾತುಗಳನ್ನು ಲೆಕ್ಕಿಸಲು ಹೇಗೆ ಸಾಧ್ಯ? ಅಲ್ಲಾಹನ ಇಂಗಿತ ಅರಿಯುವವರೆ ಇಸ್ಲಾಮ್ ಮತ್ತು ವಿಶ್ವಾಸಿಗಳೆನ್ನಬಹುದು. ಯಾರಿಗೆ ಇಸ್ಲಾಮಿನ ಬಗ್ಗೆ ಗೌರವ ಮತ್ತು ಹೆಮ್ಮೆ ಇರುವುದಿಲ್ಲವೋ ಅವನನ್ನು ಧರ್ಮಾಭಿಮಾನಿ ಮುಸಲ್ಮಾನ ಎನ್ನಲಾಗುವುದಿಲ್ಲ. ಅಲ್ಲಾಹನ ಮಾತುಗಳನ್ನು ಹಗುರವಾಗಿ ಪರಿಗಣಿಸಬೇಡಿರಿ. ದ್ವೇಷಭಾವದಿಂದ ಸತ್ಯವನ್ನು ತಿರಸ್ಕರಿಸದವರನ್ನು ಮತ್ತು ಶಾಂತಿಯ ಕಾಲದಲ್ಲಿ ಯಾರೊಬ್ಬರ ಆಗಮನದ ಅಗತ್ಯವಿಲ್ಲ ಎನ್ನುವವರನ್ನು ಕರುಣಾರ್ಹರೆಂದು ಭಾವಿಸಿರಿ. ಅವರ ಮೇಲೆ ತುಂಬ ಕರುಣೆಯುಂಟಾಗುತ್ತದೆ. ಇಸ್ಲಾಮ್ ಯಾವ ರೀತಿಯಲ್ಲಿ ಶತ್ರುಗಳ ಸುಳಿಯಲ್ಲಿ ಸಿಲುಕಿಕೊಂಡಿದೆ ಎಂದು ಅವರು ನೋಡುವುದಿಲ್ಲ. ನಾಲ್ಕೂ ದಿಕ್ಕುಗಳಿಂದ ಅದರ ಮೇಲೆ ಆಕ್ರಮಣದ ಮೇಲೆ ಆಕ್ರಮಣವಾಗ ತೊಡಗಿದೆ. ರಸೂಲುಲ್ಲಾಹ್(ಸ) ರವರನ್ನು ಅವಹೇಳನೆ ಮಾಡುತ್ತಿದ್ದಾರೆ. ಆದರೂ ಹೇಳುತ್ತಾರೆ ಯಾರ ಬರುವಿಕೆಯ ಅಗತ್ಯವೂ ಇಲ್ಲ ಎಂದು.

### ಸೆಡಿಶನ್(ದೇಶದ್ರೋಹ) ಕಾನೂನಿನಿಂದ ಇಸ್ಲಾಮ್ ಧರ್ಮ ಮಾತ್ರ ಉಪಯೋಗ ಪಡೆಯಬಹುದಾಗಿದೆ

ಸೆಡಿಶನ್(ದೇಶದ್ರೋಹ) ಕಾನೂನು ನಮಗೆ ತುಂಬ ಉಪಯುಕ್ತವಾಗಿದೆ. ಅದರಿಂದ ಕೇವಲ ನಾವೇ ಉಪಯೋಗ ಪಡೆಯಬಹುದಾಗಿದೆ. ಇತರ ಧರ್ಮಗಳನ್ನು ನಾಶಪಡಿಸಲು ಇರುವ ಒಂದು ಸಾಧನವಾಗ ಬಹುದಾಗಿದೆ. ಏಕೆಂದರೆ ನಮ್ಮ ಬಳಿ ಸಾಕ್ಷ್ಯಾಧಾರಗಳು ಮತ್ತು ಆಧ್ಯಾತ್ಮಿಕ ಜ್ಞಾನದ ನಿಧಿಗಳಿವೆ. ನಾವು ಅದರ ನಿರಂತರವಾದ ಒಂದು ಶೃಂಖಲೆಯನ್ನೇ ಜಾರಿಯಲ್ಲಿಡಬಹುದು. ಅದು ಎಂದೂ ಮುಕ್ತವಾಗಲಿಕ್ಕಿಲ್ಲ. ಆದರೆ ಆರ್ಯರಲ್ಲಿ ಅಥವಾ ಪಾದರಿಗಳಲ್ಲಿ ಯಾವ ತತ್ವಜ್ಞಾನವಿದೆ? ಹಿಂದಿನ **ಐವತ್ತು** ವರ್ಷಗಳಿಂದ ಪಾದರಿಗಳು ಏನು ಸಾಧಿಸಿ ತೋರಿಸಿದ್ದಾರೆ? **ಬೈಯುವುದು ಹೊರತು ಏನು ಪ್ರಸ್ತುತ ಪಡಿಸಲು ಸಾಧ್ಯ, ಮುಂದಾದರೂ ಏನು ಮಾಡಲು ಸಾಧ್ಯ** ಹಿಂದೂಗಳ ಕೈಯಲ್ಲಿ ಆಕ್ಷೇಪ ಮಾಡುವ ಹೊರತು ಬೇರೇನೂ ಇಲ್ಲ. ನಾವು ಸಾರಿ ಸಾರಿ ಹೇಳುತ್ತೇವೆ – ಯಾವನೆ ಆರ್ಯ ಅಥವಾ ಪಾದರಿಯ ಬಳಿ ತಮ್ಮ ಧರ್ಮಗಳ ಶ್ರೇಷ್ಠತೆಯನ್ನು ವಿವರಿಸಲು ಆಹ್ವಾನ ನೀಡಿದರೆ ಅವರು ನಮ್ಮ ಮುಂದೆ ಒಂದು ಕ್ಷಣವೂ ನಿಲ್ಲಲಾರರು.

### ಪಾಪ ಪರಿಹಾರ (ಕಫ್ಫಾರ)

ಅಲ್ಲಾಹನನ್ನು ಗುರುತಿಸುವುದು ಧರ್ಮದ ಬುನಾದಿಯಾಗಿದೆ. **ಅದನ್ನು ಪಡೆಯದೆ ಇತರ ಕರ್ಮಗಳು ಹೇಗೆ ಶುದ್ಧಗೊಳಿಸಲು ಸಾಧ್ಯ.** ಕ್ರೈಸ್ತರು ಅನ್ಯರ ಪಾವಿತ್ರ್ಯತೆಯ ಬಗ್ಗೆ ಬಹಳ ಆಕ್ಷೇಪಗಳನ್ನು ಮಾಡುತ್ತಾರೆ ಮತ್ತು ಪಾಪಪರಿಹಾರದಂತಹ **ನೀತಿರಹಿತ ಸಮಸ್ಯೆಯನ್ನು ಒಪ್ಪಿ ಆಕ್ಷೇಪ ಎಸಗುತ್ತಾರೆ. ನನಗೆ** ಇದು ತಿಳಿಯದ ಮಾತಾಗಿದೆ ಅಂದರೆ ಪಾಪಪರಿಹಾರದ ವಿಶ್ವಾಸವಿಟ್ಟುಕೊಂಡರೆ ಅಲ್ಲಾಹನ ಭಯ ಉಂಟಾಗಲು ಹೇಗೆ ಸಾಧ್ಯ? ನಮ್ಮ ಎಲ್ಲಾ ಪಾಪಗಳನ್ನು ಈಸ ಮಸೀಹರು ಸಹಿಸಿಕೊಂಡರು. ಎಲ್ಲಿಯ ತನಕ ಅಂದರೆ ಅವರನ್ನು ಮಲ್‌ವೂನ್(ಧಿಕ್ಕರಿಸಲ್ಪಟ್ಟವನು) ಎನ್ನಲಾಯಿತು. **ಮೂರು ದಿನಗಳವರೆಗೆ ನರಕವಾಸಿಯಾದರು.** ಇಂತಹ ಪರಿಸ್ಥಿತಿಯಲ್ಲಿ ಪಾಪಗಳ ಬದಲಿಗೆ ಶಿಕ್ಷೆ ಸಿಗುವುದಾದರೆ **ಪಾಪಪರಿಹಾರದ ಪ್ರಯೋಗನಾವೇನು?** ಪಾಪಪರಿಹಾರ ತತ್ವವೇ ಪಾಪಗಳನ್ನು ಉತ್ತೇಜಿಸುವಂತಿದೆ. ತತ್ವಗಳು ಸಹಜವಾಗಿ ಪ್ರಭಾವಕಾರಿಯಾಗುತ್ತವೆ. ನೋಡಿರಿ! ಹಿಂದುಗಳ ದೃಷ್ಟಿಯಲ್ಲಿ ಗೋವು ತುಂಬ ಪವಿತ್ರವೂ, ಪೂಜನೀಯವೂ ಆಗಿದೆ. ಅದರ ಪ್ರಭಾವ ಅವರ ಮೇಲೆ ಎಷ್ಟರವರಗೆ ಬೀರಿದೆ ಎಂದರೆ ಅದರ ಮೂತ್ರ ಮತ್ತು ಸಗಣಿಯನ್ನು ಸಹ ಪವಿತ್ರ ಎಂದು ಭಾವಿಸುತ್ತಾರೆ. ಗೋವಿನ ಬಗ್ಗೆ ಅವರಿಗೆ ಅಪರಿಮಿತ ಗೌರವ ಮತ್ತು ಉತ್ಸಾಹವಿದೆ. ಆ ಕಾರಣದಿಂದಲೇ ಈ ಕಾರ್ಯವು ಅವರಿಗೆ ತತ್ವವಾಗಿ ಬಿಟ್ಟಿದೆ. ನೆನಪಿಡಿರಿ! ತತ್ವಗಳು ಕಾಯಿ ಇದ್ದಂತೆ ಮತ್ತು ಕರ್ಮಗಳು ಅದರ ಸಂತಾನವಿದ್ದಂತೆ. ಮಸೀಹನು ಪಾಪಪರಿಹಾರ ಮಾಡಿದ ಮೇಲೆ ಮತ್ತು ಎಲ್ಲ ವಿಶ್ವಾಸಿಗಳ ಪಾಪಗಳನ್ನು ಸ್ವಯಂ ಎತ್ತಿಕೊಂಡ ಮೇಲೆ ಅವರೇಕೆ ಪಾಪ ಮಾಡಬಾರದು? ಆಶ್ಚರ್ಯದ ಸಂಗತಿಯೇನೆಂದರೆ ಕ್ರೈಸ್ತರು ಪಾಪ ಪರಿಹಾರದ ಮಾತುಗಳನ್ನಾಡುವಾಗ ತಮ್ಮ ಭಾಷಣವನ್ನು ನ್ಯಾಯ ಮತ್ತು ಕರುಣೆಯಿಂದ

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಸಹಾಬರವರು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಹೊಂದಿದ ಪ್ರೀತಿ ಮತ್ತು ನಿಷ್ಠೆಯ ಸಂಬಂಬಧದ ಕಾರಣ ಅವರೆಲ್ಲರಲು ತಮ್ಮ ಜೀವನದ ಬಗ್ಗೆಯು ಚಿಂತಿಸುತ್ತಿರಲಿಲ್ಲ.**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಸಯೀದ್ ಬಿನ್ ಝೈದ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12-06-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಈ ದಿನ ನಾನು ಪ್ರಸ್ತಾಪಿಸಲಿರುವ ಸಹಾಬರಲ್ಲಿ ಒಬ್ಬರು ಹಝ್ರತ್ ಸಯೀದ್ ಬಿನ್ ಝೈದ್(ರ). ಅವರ ತಂದೆಯ ಹೆಸರು ಝೈದ್ ಬಿನ್ ಅಮರ್ ಮತ್ತು ತಾಯಿಯ ಹೆಸರು ಫಾತಿಮ ಬಿನ್ತ್ ಬುಜ ಎಂದಾಗಿತ್ತು. ಅವರು ಅದಿ ಬಿನ್ ಕಅಬ್ ಬಿನ್ ಲೂಯಿ ಗೋತ್ರದವರಾಗಿದ್ದರು. ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ಉಪನಾಮ ಅಬುಲ್ ಅಅ್‌ವರ್ ಎಂದಾಗಿತ್ತು. ಅವರು ದೀರ್ಘಕಾಯದವರೂ ಗೋದಿ ವರ್ಣದವರೂ ತುಂಬ ತಲೆಗೂದಲು ಹೊಂದಿದವರೂ ಆಗಿದ್ದರು. ಅವರು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ರವರ ಚಿಕ್ಕಪ್ಪನ ಪುತ್ರರಾಗಿದ್ದರು. ಅವರ ವಂಶಾವಳಿ ಎಂಟನೆಯ ತಲೆಮಾರಿನಲ್ಲಿ ಕಅಬ್ ಬಿನ್ ಲೂಯಿಗೆ ತಲಪುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಂಶಾವಳಿ ಜೊತೆ ಸೇರುತ್ತದೆ.

(ಉಸದುಲ್‌ಗಾಬ ಸಂಪುಟ-2, ಪುಟ-476, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ಅತ್ತಬಖಾತುಲ್ ಕುಬ್ರ ಸಂಪುಟ-3, ಪುಟ-292, 294, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಂಪುಟ-2, ಪುಟ-155)

ಹಝ್ರತ್ ಸಯೀದರ ಸಹೋದರಿ ಆತಿಕರನ್ನು ಹಝ್ರತ್ ಉಮರ್(ರ) ವಿವಾಹವಾಗಿದ್ದರು. ಹಝ್ರತ್ ಉಮರ್(ರ) ರವರ ಸಹೋದರಿ ಫಾತಿಮರನ್ನು ಸಯೀದ್ ವಿವಾಹವಾಗಿದ್ದರು. ಹಝ್ರತ್ ಉಮರರ ಈ ಸಹೋದರಿ ಹಝ್ರತ್ ಉಮರ್(ರ) ಇಸ್ಲಾಮನ್ನು ಸೇರುವುದಕ್ಕೆ ಕಾರಣವಾದರು. ಹಝ್ರತ್ ಸಯೀದರ ತಂದೆ ಝೈದ್ ಬಿನ್ ಅಮರ್ ಅಜ್ಞಾನದ ಕಾಲದಲ್ಲಿ ಸಹ ಏಕದೇವನನ್ನು ಆರಾಧಿಸುತ್ತಿದ್ದರು. ಅವರು ಹಝ್ರತ್ ಇಬ್ರಾಹೀಮರ ಧರ್ಮವನ್ನು ಅನ್ವೇಷಿಸುತ್ತಿದ್ದರು. ಅವರು ಹೇಳುತ್ತಿದ್ದರು: ಹಝ್ರತ್ ಇಬ್ರಾಹೀಮರ ಆರಾಧ್ಯ ನನ್ನ ಆರಾಧ್ಯನಾಗಿದ್ದಾನೆ. ಇಬ್ರಾಹೀಮರ ಧರ್ಮವೇ ನನ್ನ ಧರ್ಮವೂ ಆಗಿದೆ. (ಉಸದುಲ್‌ಗಾಬ ಸಂಪುಟ-2, ಪುಟ-476, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ಉಸದುಲ್‌ಗಾಬ ಸಂಪುಟ-2, ಪುಟ-368, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಆ ಕಾಲ ಘಟ್ಟದಲ್ಲಿಯೂ ಕೆಲವು ಏಕದೇವ ವಿಶ್ವಾಸಿಗಳು ಇದ್ದರು. ಕೆಲವು ಮಕ್ಕಳು ಕೇಳುತ್ತಾರೆ: ಇಸ್ಲಾಮಿಗೆ ಮೊದಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧರ್ಮ ಯಾವುದಾಗಿತ್ತು, ಅವರು ಯಾರನ್ನು ಆರಾಧಿಸುತ್ತಿದ್ದರು ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಲ್ಲರಿಗಿಂತಲೂ ಮಿಗಿಲಾದ ಏಕದೇವ ವಿಶ್ವಾಸಿಯಾಗಿದ್ದರು. ಅವರು ಏಕದೇವನನ್ನು ಆರಾಧಿಸುತ್ತಿದ್ದರು.

ಝೈದ್ ಬಿನ್ ಅಮರ್ ಪ್ರತಿಯೊಂದು ದುಷ್ಕೃತ್ಯದಿಂದ ದೂರ ಸರಿದಿದ್ದರು. ಬಹುದೇವಾರಾಧಕರು ವಧಿಸಿದ ಮೃಗಗಳ ಮಾಂಸವನ್ನು ಅವರು ತಿನ್ನುತ್ತಿರಲಿಲ್ಲ. ಒಮ್ಮೆ ಝೈದ್ ಬಿನ್ ಅಮರ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಯಾಗಿ ನಿಯೋಜಿತರಾಗುವ ಮೊದಲು ಭೇಟಿಯಾಗಿದ್ದರು. ಅದರ ವಿವರ ಬುಖರಿಯಲ್ಲಿ ಹೀಗೆ ವರದಿ ಆಗಿದೆ. ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಅವರಿಂದ ವರದಿ ಆಗಿದೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಝೈದ್ ಬಿನ್ ಅಮರ್ ಬಿನ್ ನುಫೈಲ್ ಅವರನ್ನು ಬಲ್ದಹ್ ಎಂಬ ಸ್ಥಳದಲ್ಲಿ ಭೇಟಿಯಾಗಿದ್ದರು ತದನಂತರ ರಸೂಲುಲ್ಲಾಹ್ ಸಲ್ಲಲ್ಲಹು ಅಲೈಹಿವಸಲ್ಲಮರ ಮೇಲೆ ದಿವ್ಯವಾಣಿ ಅವತರಿಸಿತು ಅಂದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಪ್ರವಾದಿಯಾಗಿ ನಿಯೋಜಿತರಾಗುವ ಮೊದಲ ವಿಷಯವಾಗಿತ್ತು. ಬಲ್ದಹ್ ಎಂಬುದು ಮಕ್ಕದಿಂದ ಪಶ್ಚಿಮದ ಕಡೆ ಇರುವ ಒಂದು ಘಾಟಿಯಾಗಿದೆ, ಮಕ್ಕಕ್ಕೆ ಹೋಗುವ ಮಾರ್ಗದಲ್ಲಿ ತನ್‌ಯೀಮ್ ಎಂಬ ಮಾರ್ಗದಲ್ಲಿದೆ. ರಸೂಲುಲ್ಲಾಹ್(ಸ) ರವರ ಮುಂದೆ ಊಟ ಇರಿಸಿದಾಗ ಪ್ರವಾದಿ(ಸ) ಅದನ್ನು ಸೇವಿಸಲು ನಿರಾಕರಿಸಿದರು. ಅವರು ಹೇಳಿದರು ನಾನು ನಿಮ್ಮಲ್ಲಿ ವಧಿಸಿದ ಮಾಂಸದಿಂದ ಸೇವಿಸುವುದಿಲ್ಲ ಮತ್ತು ನಾನು ಕೇವಲ ಅಲ್ಲಾಹನ ಹೆಸರು ಹೇಳಿ ವಧಿಸಿದ ಮಾಂಸದಿಂದಲೇ ಸೇವಿಸುವುದು. ಇದಕ್ಕೆ ಝೈದ್ ಸಹ ಹೇಳಿದರು ನಾನು ಇದರಿಂದ ತಿನ್ನುವುದಿಲ್ಲ ಕೇವಲ ಅಲ್ಲಾಹನ ಹೆಸರು ಹೇಳಿ ವಧಿಸಿದ ಮಾಂಸವನ್ನೇ ಸೇವಿಸುವುದು. ಹೀಗೆ ಪ್ರವಾದಿ ಸಲ್ಲಲ್ಲಾಹು ಸಲೈಹಿವಸಲ್ಲಮರು ಮುನ್ನೆಚ್ಚರಿಕೆ ಕ್ರಮವಾಗಿ ಆ ಆಹಾರವನ್ನು ಸೇವಿಸಲಿಲ್ಲ. ಇದಕ್ಕೆ ಝೈದ್ ಹೇಳಿದರು ನಾನು ಅಲ್ಲಾಹನಲ್ಲದೆ ಅನ್ಯರ ಹೆಸರಿನಿಂದ ವಧಿಸಲಾದ ವಸ್ತುಗಳನ್ನು ಸೇವಿಸುವುದಿಲ್ಲ. ಆ ವರದಿ ಮುಂದೆ ಹೀಗಿದೆ ಝೈದ್ ಬಿನ್ ಅಮರ್ ಖುರೈಶರ ಬಲಿದಾನಗಳಲ್ಲಿ (ಪ್ರಾಣಿಗಳನ್ನು ವಧಿಸುವುದನ್ನು) ಹೀನವಾಗಿ ಕಾಣುತ್ತಿದ್ದರು. ಅವರು ಹೇಳುತ್ತಿದ್ದರು ಆಡನ್ನು ಅಲ್ಲಾಹನು ಸೃಷ್ಟಿಸಿದ್ದಾನೆ ಮತ್ತು ಆಕಾಶದಿಂದ ಅದಕ್ಕೋಸ್ಕರ ನೀರನ್ನು ಅವತರಿಸಿದ್ದಾನೆ ಮತ್ತು ಭೂಮಿಯಿಂದ ಅದಕ್ಕಾಗಿ ಹುಲ್ಲನ್ನು ಬೆಳಿದಿದ್ದಾನೆ. ಆದರೂ ನೀವು ಅದನ್ನು ಅಲ್ಲಾಹನನ್ನು ಬಿಟ್ಟು ಅನ್ಯರ ಹಸರಿನಲ್ಲಿ ವಧಿಸುತ್ತೀರಿ ಅಂದರೆ ಅಲ್ಲಾಹನನ್ನು ಬಿಟ್ಟು ಅನ್ಯರ ಹೆಸರನ್ನು ತೆಗೆದುಕೊಂಡು ವಧಿಸುವುದನ್ನು ಇಷ್ಟಪಡುತ್ತಿರಲಿಲ್ಲ. ಅದನ್ನು ಅವರು ಬಹಳ ದೊಡ್ಡ ಪಾಪ ಎಂದು ಪರಿಗಣಿಸುತ್ತಿದ್ದರು. (ಸಹೀಹ್ ಬುಖಾರಿ ಕಿತಾಬ್ ಫಝಾಎಲುಲ್ ಮನಾಖಿಬುಲ್ ಅನ್ಸಾರ್ ಹದೀಸ್-3626, ಫರ್‌ಹಂಗ್ ಸೀರತ್ ಪುಟ-61, ಝುವಾರ ಅಕಾಡಮಿ ಕರಾಚಿ 2003)

ಝೈದ್ ಬಿನ್ ಅಮರ್ ಕುಫರ್ ಹಾಗೂ ಶಿರ್ಕ್ (ಬಹುದೇವಾರಾಧನೆ) ಯಿಂದ ಬೇಸರಗೊಂಡಾಗ ಸತ್ಯಾನ್ವೇಶಣೆಯ ಹುಡುಕಾಟದಲ್ಲಿ ದೂರ ದೂರದ ರಾಷ್ಟ್ರಗಳ ಪ್ರವಾಸ ಕೈಗೊಂಡರು. ಅವರ ಈ ಪ್ರವಾಸದ ಬಗ್ಗೆ ಸಹೀಹ್ ಬುಖಾರಿಯಲ್ಲಿ ಇನ್ನೊಂದು ವರದಿ ಹೀಗಿದೆ.

ಹಝ್ರತ್ ಇಬ್ನೆ ಉಮರ್(ರ) ವರದಿ ಮಾಡುತ್ತಾರೆ ಝೈದ್ ಬಿನ್ ಅಮರ್ ಬಿನ್ ನುಫೈಲ್ ಸೀರಿಯಾದ ಕಡೆ ಧರ್ಮದ ಹುಡುಕಾಟದಲ್ಲಿ ಆ ಧರ್ಮವನ್ನು ಅನುಸರಿಸಲು ಒಂದು ಪ್ರವಾಸ ಕೈಗೊಂಡರು. ಹೀಗೆ ಅವರು ಓರ್ವ ಯಹೂದಿ ವಿದ್ವಾಂಸನನ್ನು ಭೇಟಿಯಾದರು ಅವರು ಆ ವಿದ್ವಾಂಸನನ್ನು ಅವರ ಧರ್ಮದ ಬಗ್ಗೆ ವಿಚಾರಿಸಿದರು. ಅದಕ್ಕೆ ಅವರು ಹೇಳಿದರು ನಮ್ಮ ಧರ್ಮವನ್ನು ಸ್ವೀಕರಿಸ ಬೇಡ ಏಕೆಂದರೆ ಇದು ಬಿಗಡಾಯಿಸಲಾಗಿದೆ ಇಲ್ಲದಿದ್ದರೆ ನೀವು ಸಹ ಅಲ್ಲಾಹನ ಕೋಪ ಪಡೆಯುತ್ತಿರಿ. ಝೈದ್ ಹೇಳಿದರು ನಾನು ಅಲ್ಲಾಹನ ಕೊಪದಿಂದ ಓಡುತ್ತಿದ್ದೇನೆ ಮತ್ತು ಅಲ್ಲಾಹನ ಕೋಪವನ್ನು ಎಂದೂ ಸಹಿಸುವುದಿಲ್ಲ. ಮತ್ತೆ ಅವರ ಆ ವಿದ್ವಾಂಸನನ್ನು ಪ್ರಶ್ನಿಸಿದರು ನೀವು ನನಗೆ ಬೇರೆ ಯಾವುದಾದರು ಧರ್ಮವನ್ನು ಹೇಳಿರಿ? ಅದನ್ನು ನಾನು ಅನುಸರಿಸುವೆನು.

ಅದಕ್ಕೆ ಆ ಯಹೂದಿ ವಿದ್ವಾಂಸರು ಹೇಳಿದರು. ನಾನು ಕೇವಲ ಹೇಳುವುದೇನಂದರೆ ಮನುಷ್ಯ ಹನೀಫ್ ವಿಧೇಯನಾಗಿರಬೇಕು. ಝೈದ್ ಹೇಳಿದರು ಹನೀಫ್ ಎಂದರೇನು? ಅದಕ್ಕೆ ಅವರು ಹೇಳಿದರು ಹನೀಫ್ ಎಂದರೆ ನಬಿ ಇಬ್ರಾಹೀಮರ ಧರ್ಮವಾಗಿದೆ. ಅವರು ಯಹೂದಿಯು ಆಗಿರಲಿಲ್ಲ ಮತ್ತು ಕ್ರೈಸ್ತರು ಆಗಿರಲಿಲ್ಲ ಅವರು ಕೇವಲ ಅಲ್ಲಾಹನನ್ನು ಮಾತ್ರ ಆರಾಧಿಸುತ್ತಿದ್ದರು. ಮತ್ತೆ ಝೈದ್ ಅಲ್ಲಿಂದ ಹೊರಟು ಕ್ರೈಸ್ತ ಮತದ ಓರ್ವ ವಿದ್ವಾಂಸರನ್ನು ಭೇಟಿಯಾಗಿ ಅವರ ಬಳಿಯು ಇದನ್ನು ಪ್ರಸ್ತಾಪಿಸುತ್ತಾರೆ. ಅದಕ್ಕೆ ಅವರು ಹೇಳಿದರು ನೀವು ನಮ್ಮ ಧರ್ಮವನ್ನು ಅನುಸರಿಸಬೇಡ ಒಂದು ವೇಳೆ ನೀವು ಅನುಸರಿಸಿದರೆ ಅಲ್ಲಾಹನ ಶಾಪಕ್ಕೆ ಈಡಾಗುತ್ತೀರ. ಝೈದ್ ಹೇಳಿದರು ನಾನು ಅಲ್ಲಾಹನ ಶಾಪದಿಂದ ಓಡುತ್ತಿರುವುದು ಮತ್ತು ನಾನು ಅಲ್ಲಾಹನ ಶಾಪ ಹಾಗೂ ಅಲ್ಲಾಹನ ಕೋಪವನ್ನು ನಾನು ಎಂದೂ ಸಹಿಸುವುದಿಲ್ಲ. ನನ್ನಲ್ಲಿ ಅಷ್ಟು ಶಕ್ತಿಯು ಇಲ್ಲ. ನೀವು ನನಗೆ ಮತ್ತೆ ಯಾವುದಾದರು ಧರ್ಮವನ್ನು ಕಲ್ಪಿಸಿ ಕೊಡುವಿರ? ಅದಕ್ಕೆ ಆ ಕ್ರೈಸ್ತ ವಿದ್ವಾಂಸರು ಹೇಳಿದರು ನಾನು ಕೇವಲ ಹೇಳುವುದೇನಂದರೆ ಮನುಷ್ಯ ಹನೀಫ್ ವಿಧೇಯನಾಗಿರಬೇಕು. ಝಯದ್ ಹೇಳಿದರು ಹನೀಫ್ ಎಂದರೇನು? ಅದಕ್ಕರ ಅವರು ಹೇಳಿದರು ಹನೀಫ್ ಎಂದರೆ ನಬಿ ಇಬ್ರಾಹೀಮರ ಧರ್ಮವಾಗಿದೆ. ಅವರು ಯಹೂದಿಯು ಆಗಿರಲಿಲ್ಲ ಮತ್ತು ಕ್ರೈಸ್ತರು ಆಗಿರಲಿಲ್ಲ ಅವರು ಕೇವಲ ಅಲ್ಲಾಹನನ್ನು ಮಾತ್ರ ಆರಾಧಿಸುತ್ತಿದ್ದರು. ಝೈದ್ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್‌ರವರ ಬಗ್ಗೆ ಅವರು ಹೇಳಿದಾಗ ಅವರು ಅಲ್ಲಿಂದ ಹೊರಟರು. ಹೀಗೆ ಮೈದಾನಕ್ಕೆ ಬಂದಾಗ ಅವರು ತಮ್ಮ ಎರಡೂ ಕೈಯನ್ನು ಎತ್ತಿ ಹೇಳಿದರು ಅಲ್ಲಾಹನೆ! ನಾನು ಹಝ್ರತ್ ಇಬ್ರಾಹೀಮರ ಧರ್ಮದಲ್ಲಿರುವೆನು ಎಂದು ಸ್ವೀಕರಿಸುತ್ತೇನೆ. (ಸಹೀಹ್ ಬುಖಾರಿ, ಕಿತಾಬ್ ಫಝಾಎಲ್ ಮನಾಖಿಬುಲ್ ಅನ್ಸಾರ್ ಹದೀಸ್-3627)

ಝೈದ್ ಬಿನ್ ಅಮರ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಯಾಗಿ ನಿಯೋಜಿತರಾಗುವ ಮೊದಲು ನಿಧನ ಹೊಂದಿದರು. ಹಝ್ರತ್ ಆಮಿರ್ ಬಿನ್ ರಬೀಅ ವರದಿ ಮಾಡುತ್ತಾರೆ: ಝಯದ್ ಬಿನ್ ಅಮರ್ ಧರ್ಮದ ಹುಡುಕಾಟದಲ್ಲಿದ್ದರು ಅವರು ಕ್ರೈಸ್ತ ಧರ್ಮ, ಯಹೂದಿ ಧರ್ಮ, ಮತ್ತು ಬಹುದೇವಾರಾಧನೆ, ಮೂರ್ತಿ ಪೂಜೆ ಮಾಡುವುದನ್ನು ಇಷ್ಟಪಡುತ್ತಿರಲಿಲ್ಲ. ಅವರು ತಮ್ಮ ಖೌಮಿನವರನ್ನು ಮತ್ತು ತಮ್ಮ ಪೂರ್ವಜರು ಆರಾಧಿಸುತ್ತಿದ್ದದ್ದನು ದಿಕ್ಕರಿಸುವುದನ್ನು ಪ್ರಸ್ತಾಪಿಸಿದ್ದರು. ಅವರು ವಧಿಸುವುದನ್ನು ಸಹ ಸೇವಿಸುತ್ತಿರಲಿಲ್ಲ. ಝೈದ್ ಬಿನ್ ಅಮರ್ ನನ್ನೊಂದಿಗೆ ಒಂದು ದಿವಸ ಹೇಳಿದರು: ಓ ಆಮಿರ್, ನಾನು ನನ್ನ ಕೋಮಿನ ಜನರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದೇನೆ. ನಾನು ಇಬ್ರಾಹಿಮರ ಧರ್ಮವನ್ನು ಅವಲಂಬಿಸುವವನಾಗಿದ್ದೇನೆ. ಹಝ್ರತ್ ಇಸ್ಮಾಈಲರ ಸಂತಾನದಿಂದ ಒಬ್ಬ ಪ್ರವಾದಿ ಆಗಮಿಸುವರೆಂಬ ಪ್ರತೀಕ್ಷೆಯಲ್ಲಿದ್ದೇನೆ. ಆದರೆ ನನಗೆ ಆ ಪ್ರವಾದಿಯ ಕಾಲದಲ್ಲಿ ಜೀವಿಸುವ, ಆ ಪ್ರವಾದಿಯನ್ನು ಅಂಗೀಕರಿಸಿ ಅವರನ್ನು ನಂಬುವ ಮತ್ತು ಅವರು ಸತ್ಯಸಂಧರಾದ ಪ್ರವಾದಿ ಎಂದು ಸಾಕ್ಷ್ಯ ಹೇಳುವ ಭಾಗ್ಯ ಲಭಿಸಲಾರದೆಂದು ತೋರುತ್ತದೆ. ಓ ಆಮಿರ್, ನೀವು ಆ ಪ್ರವಾದಿಯ ಕಾಲವನ್ನು ಗಳಿಸಿದರೆ ನನ್ನ ಸಲಾಮನ್ನು ಅವರಿಗೆ ತಲಪಿಸಿರಿ. ಆಮೀರ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಾನು ಪ್ರವಾದಿ ಎಂದು ಘೋಷಿಸಿದಾಗ ನಾನು ಮುಸ್ಲಿಮನಾದೆನು ಮತ್ತು ಹುಝೂರರಿಗೆ ಝೈದ್ ಬಿನ್ ಅಮರ್(ರ)ರ ಸಂದೇಶವನ್ನು ತಲಪಿಸಿದೆನು. ಹುಝೂರ್ ಸಲಾಮ್‌ಗೆ ಉತ್ತರ ನೀಡಿದರು. ಅಲ್ಲಾಹನಿಂದ ಅವರು ಕಾರುಣ್ಯವನ್ನು ಬೇಡಿದರು ಮತ್ತು ಹೇಳಿದರು: ನಾನು ಅವರನ್ನು ಸ್ವರ್ಗದಲ್ಲಿ ಕಂಡಾಗ ಅವರು ತನ್ನ ಉದ್ದವಾದ ನಿಲುವಂಗಿಯ ಕೆಳತುದಿಯನ್ನು ಎತ್ತಿಕೊಳ್ಳುತ್ತಾ ಇದ್ದರು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ-2, ಪುಟ-156, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ-3, ಪುಟ-290, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಝೈದ್ ಬಿನ್ ಅಮರ್‌ರಿಗೆ ತಾನು ಏಕದೇವ ವಿಶ್ವಾಸಿಯಾಗಿದ್ದೇನೆ ಎಂಬುದರ ಬಗ್ಗೆ ಬಹಳ ಹೆಮ್ಮೆ ಇತ್ತು. ಹಝ್ರತ್ ಅಸ್ಮಾ ಬಿನ್ತ್ ಅಬೂಬಕ್ಕರ್ ಅಜ್ಞಾನ ಕಾಲದ ಒಂದು ಘಟನೆ ಪ್ರಸ್ತಾಪಿಸುತ್ತಾರೆ: ನಾನು ಝೈದ್ ಬಿನ್ ಅಮರ್(ರ) ಅವರನ್ನು ಕಅ್‌ಬಕ್ಕೆ ಬೆನ್ನು ತಾಗಿಸಿ ನಿಂತು ಹೀಗೆ ಹೇಳುತ್ತಿದ್ದನ್ನು ಕಂಡಿರುವೆನು, ಅಂದರೆ ಅವರು ಹೇಳುತ್ತಿದ್ದರು ಎಲೈ ಖುರೈಶ್ ಜನರೇ! ಅಲ್ಲಾಹನ ಆಣೆ!! ನಿಮ್ಮಲ್ಲಿ ಯಾರು ನನ್ನನ್ನು ಬಿಟ್ಟು ಇಬ್ರಾಹೀಮರ ಧರ್ಮದಲ್ಲಿ ಇಲ್ಲ. ಝೈದ್ ಹೆಣ್ಣು ಮಕ್ಕಳನ್ನು ಜೀವಂತವಾಗಿ ದಫನ್ ಮಾಡುತ್ತಿರಲಿಲ್ಲ, ಅವರಿಗೆ ಅದರ ಬಗ್ಗೆ ತಿಳಿಯುತ್ತಿದ್ದರೆ ಅವಳಿಗೆ ಸಾಯಿಸ ಬೇಡಿ, ಅವಳಿಗೆ ಸಾಯಿಸ ಬೇಡಿ ನಾನು ಅವಳ ಖರ್ಚು ವೆಚ್ಚವನ್ನು ನೀಡುವೆನು ಎಂದು ಹೇಳುತ್ತಿದ್ದರು. ಹೀಗೆ ಹೇಳಿ ಅವರು ಆ ಹೆಣ್ಣು ಮಗುವನ್ನು ತಮ್ಮ ವಶಕ್ಕೆ ಪಡೆಯುತ್ತಿದ್ದರು. ಆ ಮಗು ಯೌವನಾಸ್ಥೆಗೆ ತಲುಪುತ್ತಿದ್ದರೆ ಅವರು ಆ ಹೆಣ್ಣಿನ ತಂದೆಗೆ ಹೇಳುತ್ತಿದ್ದರು ನಿಮ್ಮ ಅಪ್ಪಣೆ ಇದ್ದರೆ ಅವಳನ್ನು ನಿಮ್ಮ ವಶಕ್ಕೆ ನೀಡುವೆನು ಮತ್ತು ನಾನು ಅವಳ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸುವೆನು ಎಂದು ಹೇಳುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬ್ ಫಝಾಎಲ್ ಮನಾಖಿಬುಲ್ ಅನ್ಸಾರ್ ಹದೀಸ್-3828) ಅಂದರೆ ಮದುವೆ ಕಾರ್ಯಗಳು ಮುಂತಾದವುಗಳ ಖರ್ಚುಗಳನ್ನು ಸಹ ನೀಡುವೆನು. ಮತ್ತೊಂದು ವರದಿಯಲ್ಲಿ ಹಝ್ರತ್ ಅಸ್ಮಾ ಬಿನ್ತ್ ಅಬೂಬಕ್ಕರ್(ರ) ಹೇಳುತ್ತಾರೆ: ಮೊದಲನೆಯ ವರದಿಯು ಬುಖಾರಿಯದ್ದಾಗಿದೆ ಮತ್ತು ಈ ಎರಡನೇಯ ವರದಿಯು ಅಸ್ಮಾ ಉರ್‌ರಿಜಾಲ್ ಗ್ರಂಥ ಉಸದುಲ್ ಗಾಬದ್ದಾಗಿದೆ. ಹಝ್ರತ್ ಅಸ್ಮಾ ಬಿನ್ತ್ ಅಬೂಬಕ್ಕರ್ ವರದಿ ಮಾಡುತ್ತಾರೆ ನಾನು ಝೈದ್ ಬಿನ್ ಅಮರ್ ಬಿನ್ ನುಫೈಲ್‌ರವರನ್ನು ಕಅ್‌ಬಕ್ಕೆ ಬೆನ್ನು ತಾಗಿಸಿ ನಿಂತಿದ್ದನ್ನು ಕಾಣಿದ್ದೇನೆ. ಅವರು ಹೇಳುತ್ತಿದ್ದರು ಓ ಖುರೈಶ್ ಜನರೇ! ಅಲ್ಲಾಹನ ಆಣೆ!! ನಿಮ್ಮಲ್ಲಿ ಯಾರು ನನ್ನನ್ನು ಬಿಟ್ಟು ಇಬ್ರಾಹೀಮರ ಧರ್ಮದಲ್ಲಿ ಇಲ್ಲ. ಮತ್ತೆ ಅವರು ಹೇಳುತ್ತಿದ್ದರು ಓ ಅಲ್ಲಾಹನೇ!! ನಾನು ನಿನ್ನ ಆರಾಧನೆಯ ಉತ್ತಮ ಮಾರ್ಗ ಅರಿತವನಾಗಿರ ಬೇಕಾಗಿತ್ತು ಅದೇ ರೀತಿ ನಿನ್ನನ್ನು ಆರಾಧಿಸುತ್ತಿದ್ದೆ. ಆದರೆ ನನಗೆ ಅದರ ಬಗ್ಗೆ ಅರಿವಿಲ್ಲ. ತದನಂತರ ಅವರು ತಮ್ಮ ಅಂಗೈ ಮೇಲೆ ಸಜ್ದಾ ಮಾಡುತ್ತಿದ್ದರು. (ಉಸದುಲ್‌ಗಾಬ ಸಂಪುಟ-2, ಪುಟ-369-370, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಸಯೀದ್ ಬಿನ್ ಮುಸಯ್ಯಿಬ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಯಾಗಿ ನಿಯೋಜಿಸಲ್ಪಡುವುದಕ್ಕೆ ಐದು ವರ್ಷ ಮೊದಲು ಝೈದ್ ಬಿನ್ ಅಮರ್ ನಿಧನ ಹೊಂದಿದರು. ಆಗ ಖುರೈಶರು ಕಅ್‌ಬವನ್ನು ನಿರ್ಮಿಸುತ್ತಿದ್ದರು. ಅವರು ನಿಧನ ಹೊಂದುವಾಗ ಹೇಳುತ್ತಿದ್ದರು ನಾನು ಇಬ್ರಾಹೀಮಿನ ಧರ್ಮದಲ್ಲಿದ್ದೇನೆ ಎಂದು.

ಇಲ್ಲಿ ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ಜೀವನದ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ ಆದರೆ ಅವರ ತಂದೆಯ ಬಗ್ಗೆ ಸ್ವಲ್ಪ ವಿವರವೂ ಪ್ರಸ್ತಾಪಿಸಲಾಗುವುದು ಮತ್ತು ಅವರ ಪುತ್ರನಿಗೆ ಇಸ್ಲಾಮಿನಲ್ಲಿ ಲಭಿಸಿದ ಉನ್ನತ ಸ್ಥಾನವೂ ಮತ್ತು ಅವರ ತಂದೆಯ ಒಳಿತಿನ ಕಾರಣದಿಂದ ಅದನ್ನು ಇತಿಹಾಸದಲ್ಲಿ ಸಂರಕ್ಷಿಸಲಾಯಿತು. ಆದ್ದರಿಂದ ನಾನು ಇಲ್ಲಿ ಪ್ರಸ್ತಾಪಿಸಿದ ಈ ವರದಿಗಳು ಬುಖಾರಿಯಲ್ಲಿ ದೊರಕಿವೆ. ಏನೇ ಇರಲಿ ಈಗ ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ಉಳಿದ ವಿವರಗಳು ಪ್ರಸ್ತಾಪಿಸಲಾಗುವುದು.

ಒಮ್ಮೆ ಹಝ್ರತ್ ಸಯೀದ್ ಬಿನ್ ಝೈದ್(ರ) ಮತ್ತು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಪ್ರವಾದಿ ಮುಹಮ್ಮದ್ ಸಲಲ್ಲಾಹು ಅಲೈಹಿವಸಲ್ಲಮರ ಬಳಿ ಬಂದಾಗ ಅವರು ಝೈದ್ ಬಿನ್ ಅಮರ್(ರ)ರವರ ಬಗ್ಗೆ ವಿಚಾರಿಸಿದರು. ಅಂದರೆ ಹಝ್ರತ್ ಸಯೀದ್(ರ) ರವರ ತಂದೆಯವರ ಬಗ್ಗೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಅಲ್ಲಾಹನೇ ಝೈದ್ ಬಿನ್ ಅಮರ್‌ರವರಿಗೆ ಮೋಕ್ಷವನ್ನು ದಯಪಾಲಿಸಲಿ ಮತ್ತು ಅವರಿಗೆ ಕರುಣಿಸಲಿ. ಅವರ ನಿಧನವೂ ಇಬ್ರಾಹಿಮರ ದೀನಿನ ಅನುಸರಣೆಯಲ್ಲಾಯಿತು. ಅನಂತರ ಮುಸ್ಲಿಮರು ಝೈದ್ ಬಿನ್ ಅಮರ್‌ರವರನ್ನು ಸ್ಮರಿಸಿದರೆ ಅವರಿಗಾಗಿ ರಹ್ಮತ್ ಮತ್ತು ಮಗ್‌ಫಿರತ್‌ಗಾಗಿ ದುಆ ಮಾಡುತ್ತಿದ್ದರು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್. ಸಂಪುಟ-2, ಪುಟ-156-157, ಅತ್ತಬಖಾತುಲ್ ಕುಬ್ರ ಸಂಪುಟ-3, ಪುಟ-291, ದಾರುಲ್ ಕುತುಬ್ ಇಲ್ಮಿಯಾ ಬೈರೂತ್ ಲೆಬನಾನ್ 1990)

ಇನ್ನೊಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಝೈದ್ ಬಿನ್ ಅಮರ್ ಬಗ್ಗೆ ಕೇಳಿದಾಗ ಹೇಳಿದರು: ಖಿಯಾಮತ್ ದಿನ ಅವರು ಒಬ್ಬನೇ ಒಂದು ಉಮ್ಮತ್‌ಗೆ (ಸಮುದಾಯಕ್ಕೆ) ಸಮಾನವಾಗಿ ಎಬ್ಬಿಸಲ್ಪಡುವರು. (ಉಸದುಲ್ ಗಾಬ ಸಂಪುಟ-2, ಪುಟ-368, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಮೊದಲು ಹೇಳಿದ ಹಾಗೆ, ಹಝ್ರತ್ ಸಯೀದ್ ಬಿನ್ ಝೈದರು ಹಝ್ರತ್ ಉಮರ್(ರ) ರ ಬಾವನಾಗಿದ್ದರು. ಹಝ್ರತ್ ಸಯೀದ್ ಬಿನ್ ಝೈದರ ಸಹೋದರಿ ಆತಿಕ ಬಿನ್ತ್ ಝೈದ್ ಹಝ್ರತ್ ಉಮರ್‌ರನ್ನು ವಿವಾಹವಾಗಿದ್ದರು. ಹಝ್ರತ್ ಸಯೀದ್ ಬಿನ್ ಝೈದ್ ಮತ್ತು ಅವರ ಪತ್ನಿ ಹಝ್ರತ್ ಫಾತಿಮ ಬಿನ್ತ್ ಖತ್ತಾಬ್ ಇವರಿಬ್ಬರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್‌ಗೆ ಪ್ರವೇಶಿಸುವ ಮೊದಲೇ ಮುಸ್ಲಿಮರಾಗಿದ್ದರು. ಹಝ್ರತ್ ಸಯೀದರ ಪತ್ನಿ, ನಾನು ಮೊದಲು ಹೇಳಿದ ಹಾಗೆ, ಹಝ್ರತ್ ಉಮರ್ ಇಸ್ಲಾಮ್ ಧರ್ಮ ಸ್ವೀಕರಿಸಲು ಕಾರಣರಾಗಿದ್ದರು. (ಉಸದುಲ್ ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ-2, ಪುಟ-476, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ಅತ್ತಬಖಾತುಲ್ ಕುಬ್ರ ಸಂಪುಟ-3, ಪುಟ-292, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಇದರ ವಿವರಗಳು ಇದಕ್ಕೂ ಮುಂಚೆ ಹಝ್ರತ್ ಖಬ್ಬಾಬ್ ಬಿನ್ ಅರತ್(ರ) ರವರ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದ್ದೇನೆ ಆದರೆ ಇಲ್ಲಿ ಹಝ್ರತ್ ಸಯೀದ್(ರ) ರವರ ಪ್ರಸ್ತಾವನೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸುವೆನು. ಅದನ್ನು ವಿವರಿಸುತ್ತಾ ಹಝ್ರತ್ ಬಶೀರ್ ಅಹ್ಮದ್ ಸಾಹೆಬ್(ರ) ಸೀರತ್ ಖಾತಮುನ್ನಬೀಯಿೀನಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ: ಇನ್ನೂ ಹಝ್ರತ್ ಹಮ್ಝಾ(ರ) ಅವರು ಇಸ್ಲಾಮ್ ಸ್ವೀಕರಿಸಿ ಕೆಲವೇ ದಿನಗಳಾಗಿತ್ತು ಆಗ ಅಲ್ಲಾಹನು ಮುಸ್ಲಿಮರಿಗೆ ಇನ್ನೊಂದು ಸಂತೋಷದ ಸೌಭಾಗ್ಯ ತೋರಿಸಿದನು ಅಂದರೆ ಇಸ್ಲಾಮಿನ ಕಡು ವಿರೋಧಿಯಾದ ಹಝ್ರತ್ ಉಮರ್(ರ) ಮುಸ್ಲಿಮರಾದರು. ಅವರು ಇಸ್ಲಾಮ್ ಸ್ವೀಕರಿಸಿದ ಘಟನೆಯು ಬಹಳ ಮನೋಹರವಾಗಿದೆ. ಅನೇಕ ಜನರು ಇದನ್ನು ಕೇಳಿದ್ದಿರಿ ಮತ್ತು ಓದಿರುವಿರಿ ಆದರೆ ಈ ಸಂದರ್ಭದಲ್ಲಿ ನಾನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ನೀಡಿರುವ ವಿವರವನ್ನು ಸಹ ಪ್ರಸ್ತಾಪಿಸುವೆನು ಇದನ್ನು ವಿವರಿಸುವುದು ಇವರ ಇತಿಹಾಸಕ್ಕೆ ಬಹಳ ಅವಶ್ಯಕವಾಗಿದೆ. ಹಝ್ರತ್ ಉಮರ್(ರ) ರವರ ಸ್ವಭಾವವೂ ಬಹಳ ಕಠೋರ ಸ್ವಭಾವವಾಗಿತ್ತು ಮತ್ತು ಇಸ್ಲಾಮ್ ಧರ್ಮದ ವಿರೋಧದಲ್ಲಿ ಅವರು ಇನ್ನಷ್ಟು ಕಠೋರಾಗಿದ್ದರು. ಹೀಗಾಗಿ ಹಝ್ರತ್ ಉಮರ್(ರ) ಇಸ್ಲಾಮ್ ಸ್ವೀಕರಿಸುವ ಮೊದಲು ಬಡ ಮುಸ್ಲಿಮರಿಗೆ ಬಹಳ ಹಿಂಸೆ ನೀಡುತ್ತಿದ್ದರು. ಹಿಂಸೆ ನೀಡುತ್ತಾ ಅವರು ಆಯಾಸಗೊಂಡರು. ಇವರೆಲ್ಲರು ಹಿಂದಿರುಗಲು ಸಾಧ್ಯವಿಲ್ಲ ಎಂದು ಭಾವಿಸಿ ಇಸ್ಲಾಮ್ ಧರ್ಮದ ಸಂಸ್ಥಾಪಕರನ್ನೆ ಕೊಂದು ಹಾಕಬೇಕೆಂದು ಯೋಚಿಸಿದರು. ಈ ಯೋಚನೆ ಬಂದ ತಕ್ಷಣವೇ ಅವರು ತಮ್ಮ ಖಡ್ಗವನ್ನು ತೆಗೆದುಕೊಂಡು ಮನೆಯಿಂದ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಹುಡುಕಾಡುತ್ತಾ ಹೊರಟರು. ದಾರಿಯಲ್ಲಿ ಓರ್ವ ವ್ಯಕ್ತಿ ಹಝ್ರತ್ ಉಮರ್(ರ) ರವರು ಖಡ್ಗವನ್ನು ತೆಗೆದುಕೊಂಡು ಹೋಗುತಿದ್ದದ್ದನ್ನು ಕಂಡು ಕೇಳಿದನು. ಉಮರ್! ಎಲ್ಲಿಗೆ ಹೋಗುತ್ತಿದ್ದೀರಿ? ಎಂದು ಅದಕ್ಕೆ ಉಮರ್(ರ) ಉತ್ತರಿಸಿದರು. ಮುಹಮ್ಮದ್(ಸ) ಅವರನ್ನು ಮುಗಿಸಲು ಹೋಗುತ್ತಿದ್ದೇನೆ. ಅದಕ್ಕೆ ಆತನು ಹೇಳಿದನು ಏನು ನೀನು ಅವರನ್ನು ಕೊಂದು ಬನೂ ಅಬ್ದ್ ಮನಾಫ ಅವರಿಂದ ಉಳಿಯಲು ಸಾಧ್ಯವೇ? ಮೊದಲು ನೀವು ನಿಮ್ಮ ಮನೆಯ ಕಡೆ ಗಮನ ನೀಡಿರೀ. ನಿಮ್ಮ ಸಹೋದರಿ ಹಾಗೂ ನಿಮ್ಮ ಭಾವ ಮುಸ್ಲಿಮರಾಗಿದ್ದಾರೆ. ಇದಕ್ಕೆ ಹಝ್ರತ್ ಉಮರ್(ರ) ತಕ್ಷಣ ತಿರುಗಿ ನೋಡಿ, ತನ್ನ ಸಹೋದರಿಯಾದ ಫಾತಿಮರವರ ಮನೆಗೆ ತೆರಳಿದರು. ಮನೆಯ ಹತ್ತಿರ ತಲುಪಿದಾಗ ಮನೆಯ ಒಳಗಿನಿಂದ ಪವಿತ್ರ ಖುರ್‌ಆನಿನ ಪಠಣೆಯ ಧ್ವನಿ ಕೇಳಿಸಿತು. ಅದನ್ನು ಖಬ್ಬಾಬ್ ಬಿನ್ ಅಲ್‌ಅರತ್(ರ) ಸ್ವಗಸಾಗಿ ಪಠಿಸುತ್ತಿದ್ದರು. ಈ ಧ್ವನಿಯನ್ನು ಉಮರ್ ಆಲಿಸಿದಾಗ ಅವರ ಸಿಟ್ಟು ಇನ್ನಷ್ಟು ಜಾಸ್ತಿ ಆಯಿತು. ಅವರು ಬೇಗನೆ ಮನೆ ಒಳಗೆ ಪ್ರವೇಶಿಸಿದರು ಆದರೆ ಅವರು ಮನೆಯೊಳಗೆ ಪ್ರವೇಶಿಸುತ್ತಿರುವ ಶಬ್ದವನ್ನು ಕೇಳಿ ಹಝ್ರತ್ ಖಬ್ಬಾಬ್ ಬಚ್ಚಿಟ್ಟುಕೊಂಡರು. ಫಾತಿಮಾರವರು ಪವಿತ್ರ ಖುರ್‌ಆನಿನ ಆ ಪತ್ರಗಳನ್ನು ಬಚ್ಚಿಟ್ಟರು. ಹಝ್ರತ್ ಉಮರ್(ರ) ರವರ ಸಹೋದರಿಯ ಹೆಸರು ಫಾತಿಮಾ ಆಗಿತ್ತು. ಹಝ್ರತ್ ಉಮರ್(ರ) ಮನೆಯೊಳಗೆ ಬಂದ ತಕ್ಷಣ ತಮ್ಮ ಸಹೋದರಿಯನ್ನು ಪ್ರಶ್ನಿಸಿದರು ನೀವು ನಿಮ್ಮ ಧರ್ಮ ಪರಿವರ್ತನೆ ಮಾಡಿಕೊಂಡಿದ್ದೀರಿ ಎಂದು ಆಲಿಸಿದ್ದೇನೆ. ಇದನ್ನು ಹೇಳಿ ಅವರು ತಮ್ಮ ಭಾವ ಹಝ್ರತ್ ಸಯೀದ್ ಬಿನ್ ಝೈದ್(ರ) ಅವರ ಕಡೆ ಧಾವಿಸಿದರು ಇದನ್ನು ನೋಡಿ ಫಾತಿಮ ತಮ್ಮ ಪತಿಯನ್ನು ರಕ್ಷಿಸಲು ಮುಂದಾದಾಗ ಅವರು ಗಾಯಗೊಂಡರು ಆದರೂ ಸಹ ಅವರು ಬಹಳ ಧೈರ್ಯದಿಂದ ಹೇಳಿದರು. ಹೌದು ಉಮರ್! ನಾನು ಮುಸ್ಲಿಮರಾಗಿದ್ದೇವೆ ನಿಮ್ಮ ಕೈಯಲ್ಲಿ ಏನು ಮಾಡಲು ಸಾಧ್ಯವೋ ಅದನ್ನು ಮಾಡಿರಿ. ನಾವು ಈಗ ಇಸ್ಲಾಮ್ ತ್ಯಜಿಸುವುದಿಲ್ಲ. ಹಝ್ರತ್ ಉಮರ್(ರ) ಬಹಳ ಕಠು ಸ್ವಭಾವದವರಾಗಿದ್ದರೂ ಮನಸ್ಸಿನಲ್ಲಿ ಬಹಳ ಮೃಧು ಸ್ವಭಾವದವರೂ ಆಗಿದ್ದರು ಈ ಸ್ವಭಾವವು ಕೆಲವೊಮ್ಮೆ ಕಾಣಿಸುತ್ತಿತ್ತು. ತಮ್ಮ ಸಹೋದರಿಯ ಈ ಧೈರ್ಯದ ಮಾತುಗಳನ್ನು ಆಲಿಸಿ ಅವರ ಕಡೆ ನೋಡಿದಾಗ ಅವರ ಸಹೋದರಿ ರಕ್ತದಲ್ಲಿ ಮುಳುಗಿದ್ದರು. ಈ ದೃಶ್ಯ ಹಝ್ರತ್ ಉಮರ್(ರ) ರವರ ಮೇಲೆ ಒಂದು ವಿಶೇಷ ಪ್ರಭಾವವನ್ನು ಬೀರಿತು. ಸ್ವಲ್ಪ ಹೊತ್ತು ನಿಶಬ್ಧರಾಗಿ ಸಹೋದರಿಯನ್ನು ಕೇಳಿದರು: ನನಗೆ ನೀವು ಪಠಿಸುತ್ತಿದ್ದುದ್ದನ್ನು ತೋರಿಸಿರಿ ಎಂದು. ಅದಕ್ಕೆ ಫಾತಿಮ ಹೇಳಿದರು: ನಾನು ಅದನ್ನು ತೋರಿಸುವುದಿಲ್ಲ ಏಕೆಂದರೆ ನೀವು ಆ ಪತ್ರಗಳನ್ನು ಭಸ್ಮಗೊಳಿಸುತ್ತೀಯ. ಅದಕ್ಕೆ ಉಮರ್ ಹೇಳಿದರು ಇಲ್ಲಾ ನನಗೆ ಅದನ್ನು ತೋರಿಸಿರಿ ನಾನು ಅದನ್ನು ನಿಮಗೆ ಹಿಂದಿರುಗಿಸುವೆನು. ಫಾತಿಮ ಹೇಳಿದರು: ನೀವು ಅಶುದ್ಧರಾಗಿದ್ದೀರ ಪವಿತ್ರ ಖುರ್‌ಆನ್ ಶುದ್ಧ ಸ್ಥಿತಿಯಲ್ಲಿ ಮುಟ್ಟಬೇಕು. ನೀವು ಮೊದಲು ಸ್ನಾನ ಮಾಡಿ ಶುದ್ಧರಾಗಿರಿ ಅನಂತರ ನಾನು ಅದನ್ನು ತೋರಿಸುವೆನು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಬರೆಯುತ್ತಾರೆ: ಹೀಗೆ ಸ್ನಾನ ಮಾಡಲು ಹೇಳುವುದಕ್ಕೆ ಕಾರಣ ಉಮರ್(ರ) ರವರ ಕೋಪ ತಣ್ಣಗಾಗಲಿ ಎಂದು ಹೇಳಿರಬಹುದು. ಉಮರ್(ರ) ಸ್ನಾನ ಮಾಡಿ ಬಂದಾಗ ಫಾತಿಮಾ ಅವರಿಗೆ ಪವಿತ್ರ ಖುರ್‌ಆನಿನ ಆ ಕಾಗದಗಳನ್ನು ನೀಡಿದರು. ಅವರು ಅದನ್ನು ಆಲಿಸಿದಾಗ ಸೂರ ತಾಹದ ಪ್ರಾರಂಭದ ವಚನಗಳಿದ್ದವು. ಹಝ್ರತ್ ಉಮರ್(ರ) ಅವರು ಅದನ್ನು ಬಹಳ ಗಾಂಭೀರ್ಯದಿಂದ ಆಲಿಸಿದಾಗ ಅದರ ಒಂದೊಂದು ಅಕ್ಷರಗಳು ಅವರ ಮನಸ್ಸಿನಲ್ಲಿ ಪ್ರಭಾವ ಬೀರುತ್ತಿತ್ತು. ಅದನ್ನು ಆಲಿಸುತ್ತಾ ಹಝ್ರತ್ ಉಮರ್(ರ) ಈ ವಚನಕ್ಕೆ ತಲುಪಿದರು:

**ಇನ್ನನಿ ಅನಲ್ಲಾಹು ಲಾ ಇಲಾಹ ಇಲ್ಲಾ ಅನಾ ಫಾಬುದೂನಿ. ವಅಖಿಮಿಸ್ಸಲಾತ ಲಿಝ್ಹಿಕ್ರಿ. ಇನಜ್ಜ ಸಾಅತ ಆತಿಯರುನ್ ಅಕಾದು ಉಖ್‌ಫೀಹಾ ಲಿತುಜ್‌ಝಾ ಕುಲ್ಲು ನಫ್‌ಸಿನ್ ಬಿಮಾ ತಸ್‌ಆ. (ತಾಹಾ:15–16)**

ಅಂದರೆ: 'ದಿಟವಾಗಿಯೂ ನಾನೇ ಅಲ್ಲಾಹ್. ನನ್ನ ಹೊರತು ಬೇರೆ ದೇವನಿಲ್ಲ. ಆದ್ದರಿಂದ ನನ್ನನ್ನು ಆರಾಧಿಸು; ನನ್ನ ಸ್ಮರಣೆಗೋಸ್ಕರ ಪ್ರಾರ್ಥನೆಯನ್ನು ನಿಷ್ಠೆಯಿಂದ ಸಲ್ಲಿಸು. 'ಖಂಡಿತವಾಗಿಯೂ ಅಂತ್ಯದಿನ ಬರಲಿದೆ. ಪ್ರತಿಯೊಂದು ಆತ್ಮ ಅದರ ಕರ್ಮಕ್ಕೆ ತನ್ನ ಪ್ರತಿಫಲವನ್ನು ಪಡೆಯುವಂತಾಗಲು ನಾನು ಅದನ್ನು ಪ್ರಕಟಪಡಿಸುವೆನು.

ಹಝ್ರತ್ ಉಮರ್(ರ) ಈ ವಚನವನ್ನು ಆಲಿಸಿದಾಗ ಅವರ ಕಣ್ಣು ತೆರೆದಂತಾಯಿತು. ಅವರು ಹೇಳಿದರು ಇದು ಎಂತಹ ವಿಸ್ಮಯವಾದ ಮತ್ತು ಶುಕ್ತ ವಾಕ್ಯಗಳಾಗಿವೆ. ಖಬ್ಬಾಬ್(ರ) ಈ ಪದಗಳನ್ನು ಆಲಿದಾಗ ಅವರು ಹೊರಬಂದು ಅಲ್ಲಾಹನಲ್ಲಿ ಕೃತಜ್ಞತೆ ಹೇಳಿದರು. ಇದು ಪ್ರವಾದಿ(ಸ) ರವರ ದುಆವಿನ ಪ್ರತಿಫಲವಾಗಿದೆ ಏಕೆಂದರೆ ಅಲ್ಲಾಹನಾಣೆ! ಕಳೆದ ದಿವಸ ನಾನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ದುಆ ಮಾಡುತ್ತಿರುವುದನ್ನು ಆಲಿಸಿದ್ದೇನೆ ಓ ಅಲ್ಲಾಹನೇ!! ನೀನು ಉಮರ್ ಬಿನ್ ಖತ್ತಾಬ್ ಅಥವಾ ಉಮರ್ ಬಿನ್ ಹಿಶ್ಯಾಮ್ ಅಂದರೆ ಅಬೂಜಹಲ್ ಇವರಿಬ್ಬರಲ್ಲಿ ಯಾರಿಗಾದರು ಇಸ್ಲಾಮ್ ನೀಡು. ಹಝ್ರತ್ ಉಮರ್(ರ) ರವರಿಗೆ ಪ್ರವಾದಿ(ಸ) ಅವರ ಸತ್ಯತೆಯು ಸ್ಪಷ್ಟವಾದಾಗ ಅಲ್ಲಿ ನಿಲ್ಲಲು ಕಷ್ಟವಾಗುತ್ತಿತ್ತು. ಅವರು ಖಬ್ಬಾಬ್(ರ) ರವರಿಗೆ ಹೇಳಿದರು ನನಗೆ ತಕ್ಷಣ ಪ್ರವಾದಿ(ಸ) ಎಲ್ಲಿದ್ದಾರೆ ಎಂದು ತಿಳಿಸಿರಿ ಎಂದು ಹೇಳಿದರು. ಅವರು ಎಷ್ಟರ ಮಟ್ಟಿಗೆ ಪ್ರಭಾವಿತರಾಗಿದ್ದರು ಎಂದರೆ ಅವರ ಕೈಯಲ್ಲಿದ್ದ ಖಡ್ಗವನ್ನು ಸಹ ಒಳಗಿರಿಸಲಿಲ್ಲ ಹಾಗೆಯೇ ತೆಗೆದುಕೊಂಡು ಹೋದರು. ಏನೇ ಇರಲಿ ಆ ಕಾಲದಲ್ಲಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ದಾರೆ ಅರ್‌ಖಮ್‌ನಲ್ಲಿ ವಾಸಿಸುತ್ತಿದ್ದರು. ಹೀಗಾಗಿ ಹಝ್ರತ್ ಖಬ್ಬಾಬ್(ರ) ಅವರಿಗೆ ಅಲ್ಲಿನ ವಿಳಾಸವನ್ನೀಡಿದರು. ಉಮರ್(ರ) ಅಲ್ಲಿ ಹೋಗಿ ಬಾಗಿಲನ್ನು ಜೋರಾಗಿ ಬಡಿದರು. ಸಹಾಬರವರು ಬಾಗಿಲಿನಿಂದ ನೋಡಿದಾಗ ಅದು ಉಮರ್(ರ) ತಮ್ಮ ಖಡ್ಗವನ್ನು ಕೈಯಲ್ಲಿರಿಸಿ ನಿಂತಿದ್ದರು. ಹೀಗಾಗಿ ಅವರು ಬಾಗಿಲನ್ನು ತೆರೆಯಲು ಹಿಂಜರಗಿದರು ಆದರೆ ಪ್ರವಾದಿ(ಸ) ಹೇಳಿದರು: ಬಾಗಿಲು ತೆಗೆಯಿರಿ ಎಂದರು ಹಝ್ರತ್ ಹಮ್ಝ(ರ) ಸಹ ಹೇಳಿದರು ಬಾಗಿಲು ತೆರೆಯಿರಿ ಆತನು ಒಳ್ಳೆಯ ನಿಯ್ಯತ್ತಿನಿಂದ ಬಂದಿದ್ದರೆ ಒಳ್ಳೆಯದು ಇಲ್ಲವಾದರೆ ಅಲ್ಲಾಹನ ಆಣೆ ಆತನ ಶಿರವನ್ನು ಕತ್ತರಿಸಿ ಹಾಕುವೆನು. ಬಾಗಿಲು ತೆರೆಯಲಾಯಿತು. ಉಮರ್ ತಮ್ಮ ಖಡ್ಗದೊಂದಿಗೆ ಒಳಗೆ ಪ್ರವೇಶಿಸಿದರು. ಅವರನ್ನು ಕಂಡು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ನೀವು ಇಲ್ಲಿ ಬಂದಿರುವ ಉದ್ದೇಶ ಏನಾಗಿದೆ? ಅಲ್ಲಾಹನ ಆಣೆ ನಾನು ನೋಡುವುದೇನಂದರೆ ನಿಮಗೆ ಅಲ್ಲಾಹನ ನರಕಾಗ್ನಿಗಾಗಿ ಸೃಷ್ಠಿಸಲಿಲ್ಲ. ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್!! ನಾನು ಮುಸ್ಲಿಮನಾಗಲು ಬಂದಿರುವೆನು. ಪ್ರವಾದಿ(ಸ) ಅವರು ಈ ಶಬ್ಧಗಳನ್ನು ಕೇಳಿದ ತಕ್ಷಣ ಸಂತೋಷದಿಂದ ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್ ಎಂದು ಕೂಗಿದರು ಅದೇ ರೀತಿ ಸಹಾಬರವರು ಸಹ ಎಷ್ಟು ಜೋರಾಗಿ ಅಲ್ಲಾಹು ಅಕ್‌ಬರ್ ಎಂದು ಕೂಗಿದರು ಎಂದರೆ ಅಲ್ಲಿನ ಬೆಟ್ಟಗಳಲ್ಲಿ ಅವರ ಧ್ವನಿ ವಿಜ್ರಂಭಿಸುತ್ತಿತ್ತು. (ಸೀರತ್ ಖಾತುಮುನ್ನಬೀಯಿೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–157–159)

ಹೀಗೆ ಹಝ್ರತ್ ಉಮರ್(ರ) ಮುಸ್ಲಿಮರಾಗಲು ಹಝ್ರತ್ ಸಯೀದ್ ಬಿನ್ ಝೈದ್ ಸಹ ಕಾರಣವಾಗಿದ್ದರು. ಹಝ್ರತ್ ಸಯೀದ್ ಹಿಜ್‌ರತ್ ಮಾಡಿದ ಪ್ರಥಮರಲ್ಲಿ ಸೇರಿದ್ದರು. ಹಝ್ರತ್ ರಾಫಿಅ್ ಬಿನ್ ಮಾಲಿಕರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಯೀದರ ಸಹೋದರ ಸಂಬಂಧ ಸ್ಥಾಪಿಸಿದ್ದರು. ಇನ್ನೊಂದು ವರದಿ ಪ್ರಕಾರ ಹಝ್ರತ್ ಅಬೀ ಬಿನ್ ಕಅಬರೊಂದಿಗೆ ಸಹೋದರ ಸಂಬಂಧ ಸ್ಥಾಪಿಸಲಾಗಿತ್ತು. ಹಝ್ರತ್ ಸಯೀದ್ ಬಿನ್ ಝೈದ್(ರ) ಬದರ್ ಯುದ್ಧದಲ್ಲಿ ಭಾಗವಹಿಸಲಿಲ್ಲ. ಆದರೂ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರಿಗೆ ಯುದ್ಧದಲ್ಲಿ ಗಳಿಸಿದ ಸಂಪತ್ತಿನಿಂದ ಅವರಿಗೂ ಪಾಲು ನೀಡಿದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–476, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ಅತ್ತಬಖಾತುಲ್‌ಕುಬ್ರ ಸಂಪುಟ–3, ಪುಟ–292, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಮತ್ತು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆದೇಶದ ಮೆರೆಗೆ ಯಾವ ಸಹಾಬರನ್ನು ಬದರ್ ಯುದ್ಧದಲ್ಲಿ ಭಾಗವಹಿಸದಿದ್ದರೂ ಯುದ್ಧದಲ್ಲಿ ಗಳಿಸಿದ ಸಂಪತ್ತಿನಲ್ಲಿ ಪಾಲು ನೀಡಲಾಯಿತು ಅವರನ್ನು ಬದರಿ ಸಹಾಬರಲ್ಲಿ ಸೇರಿಸಲಾಗಿದೆ.

ಅವರು ಬದರ್ ಯುದ್ಧದಲ್ಲಿ ಭಾಗವಹಿಸದ ಕಾರಣ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ರವರ ಪ್ರಸ್ತಾವನೆಯ ಸಂಧರ್ಭದಲ್ಲಿ ಪ್ರಸ್ತಾಪಿಸಲಾಗಿತ್ತು ಆದರೂ ಇಲ್ಲಿಯು ಪ್ರಸ್ತಾಪಿಸುವುದು ಅವಶ್ಯಕವಾಗಿರುವುದರಿಂದ ಪ್ರಸ್ತಾಪಿಸಲಾಗುತ್ತಿದೆ.

ಹಝ್ರತ್ ಸಯೀದ್ ಬಿನ್ ಝೈದ್‌ರಿಗೆ ಬದರ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ ಇದಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುರೈಶಿಗಳ ಒಂದು ವ್ಯಾಪಾರಿ ತಂಡ ಸಿರಿಯಾದಿಂದ ಮರಳುವ ಸಮಯವನ್ನು ಅಂದಾಜು ಮಾಡಿ ಮದೀನದಿಂದ ಬದರ್ ಯುದ್ಧಕ್ಕೆ ಅವರು ಹೊರಡುವುದಕ್ಕಿಂತ 10 ದಿವಸ ಮೊದಲು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ(ರ) ಮತ್ತು ಹಝ್ರತ್ ಸಯೀದ್ ಬಿನ್ ಝೈದ್(ರ) ಅವರನ್ನು ತಂಡದ ಸಂಚಾರ ತಿಳಿಸುವುದಕ್ಕೆ ಕಳುಹಿಸಿದ್ದರು. ಇವರಿಬ್ಬರು ಅಲ್ಲಿಂದ ಹೊರಟು ಅಹ್‌ಮದ್ ಸಮುದ್ರದ ದಡದ ಒಂದು ಸ್ಥಳವಾದ **ಹೌರ** ಎಂಬಲ್ಲಿಗೆ ತಲುಪಿದರು ಅ ಸ್ಥಳದಲ್ಲಿ ಹಜಾಝ್ ಮತ್ತು ಸೀರಿಯಾದ ಯಾತ್ರಿಕರ ತಂಡಗಳು ಮುಂದುವರಿಯುತ್ತಿದ್ದವು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ತಲ್‌ಹ(ರ) ಹಾಗೂ ಹಝ್ರತ್ ಸಯೀದ್(ರ) ಅವರಿಬ್ಬರು ಹಿಂದಿರುಗಿ ಬರುವುದಕ್ಕೆ ಮುಂಚೆಯೇ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಮಾತು ತಿಳಿದು ಬಂದಿತು. ಆದ್ದರಿಂದ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತಮ್ಮ ಎಲ್ಲಾ ಸಂಗಡಿಗರನ್ನು ಕರೆಸಿ ಖುರೈಶರ ತಂಡವನ್ನು ಪಡೆಯುವುದಕ್ಕೆ ಹೊಟರು. ಆದರೆ ಆ ತಂಡವು ಬೇರೊಂದು ಮಾರ್ಗದಿಂದ ಅಂದರೆ ಕರಾವಳಿ ಪ್ರದೇಶದಿಂದ ವೇಗವಾಗಿ ಹೊರಟಿತ್ತು. ಇದರ ಬಗ್ಗೆ ಇದಕ್ಕೂ ಮುಂಚೆ ವಿವರಿಸಲಾಗಿದೆ. ಮತ್ತು ಯಾತ್ರಿಕರ ತಂಡವು ಹುಡುಕಾಡುತ್ತಿರುವ ತಂಡಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಹಗಲೂ ರಾತ್ರಿ ಪ್ರಯಾಣಿಸುತ್ತಿದ್ದರು. ಈ ವಿರೋಧಿಗಳ ತಂಡವು ಮಕ್ಕದವರದ್ದಾಗಿತ್ತು. ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ(ರ) ಹಾಗೂ ಹಝ್ರತ್ ಸಯೀದ್ ಬಿನ್ ಝೈದ್(ರ) ಇವರಿಬ್ಬರು ಮದೀನಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಸುದ್ದಿ ತಿಳಿಸಬೇಕೆಂದು ಹೊರಟಿತ್ತು. ಅವರಿಬ್ಬರಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಬದರ್ ಯುದ್ಧಕ್ಕೆ ಹೋರಟಿರುವುದರ ಬಗ್ಗೆ ತಿಳಿದಿರಲಿಲ್ಲ. ಅವರಿಬ್ಬರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಖುರೈಶರೊಂದಿಗೆ ಯುದ್ಧದ ದಿವಸ ಮದೀನಕ್ಕೆ ತಲುಪಿದರು. ರಸೂಲುಲ್ಲಾಹ್(ಸ) ಅವರನ್ನು ಬೇಟಿ ಆಗಲು ಅವರು ಮದೀನದಿಂದ ಹೊರಟರು. ಅನಂತರ ಅವರಿಬ್ಬರು ರಸೂಲುಲ್ಲಾಹ್(ಸ) ಅವರು ಬದರ್‌ನಿಂದ ಹಿಂದಿರುಗಿದಾಗ **ತುರ್‌ಬಾನ್** ಎಂಬಲ್ಲಿ ಭೇಟಿ ಆದರು. ತುರ್‌ಬಾನ್ ಮದೀನದಿಂದ 19 ಮೈಲಿ ದೂರದ ಒಂದು ಸ್ಥಳವಾಗಿದೆ. ಅಲ್ಲಿ ಸಿಹಿ ನೀರಿನ ಅನೇಕ ಬಾವಿಗಳಿವೆ. ಬದರ್ ಯುದ್ಧಕ್ಕೆ ಹೋಗುವಾಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಇಲ್ಲಿ ತಂಗಿದ್ದರು. ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಸಯೀದ್(ರ) ಯುದ್ಧದಲ್ಲಿ ಭಾಗವಹಿಸಲಿಲ್ಲವಾದರೂ ಅವರಿಗೆ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗನೀಮತ್ ಸಂಪತ್ತಿನಿಂದ ಪಾಲು ನೀಡಿದರು. ಹೀಗೆ ಅವರಿಬ್ಬರು ಬದರ್‌ನಲ್ಲಿ ಭಾಗಿಯಾಗಿದ್ದರು ಎಂದು ಹೇಳಲಾಗಿದೆ. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–292–293, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ಅಸ್ಸೀರತುನ್ನಬವೀಯ ಅಲಝೌಇಲ್ ಖುರ್‌ಆನ್ ವಸ್ಸುನ ಸಂಪುಟ–2, ಪುಟ–123, ಫರ್‌ಹಂಗ್ ಸೀರತ್ ಪುಟ–75, ಝುವಾರ ಅಕಾಡಮಿ ಕರಾಚಿ 2003)

ಹಝ್ರತ್ ಸಯೀದ್ ಬಿನ್ ಝೈದ್ ಅಶ್‌ರ ಮುಬಶ್ಶರ ರಲ್ಲಿ ಸೇರಿದವರಾಗಿದ್ದರು. ಎಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಸ್ವರ್ಗ ಸಿಗುವುದಾಗಿ ಶುಭವಾರ್ತೆ ನೀಡಲ್ಪಟ್ಟ ಹತ್ತು ಸಹಾಬರಲ್ಲಿ ಒಬ್ಬರಾಗಿದ್ದರು. ಹಝ್ರತ್

ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳುತ್ತಾರೆ: ಅಬೂಬಕರ್, ಉಮರ್, ಉಸ್ಮಾನ್, ಅಲಿ, ತಲ್‌ಹ, ಝುಬೈರ್, ಅಬ್ದುರ್ರಹ್ಮಾನ್ ಬಿನ್ ಔಫ್, ಸಅದ್ ಬಿನ್ ಅಬೀ ವಖಾಸ್, ಸಯೀದ್ ಬಿನ್ ಝೈದ್ ಮತ್ತು ಅಬೂ ಉಬೈದ ಬಿನ್ ಜರಾಹ್ ಎಂಬ ಹತ್ತು ಸಹಾಬರಲ್ಲಿ ಪ್ರತಿಯೊಬ್ಬರ ಹೆಸರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಚ್ಚರಿಸಿ ಹೇಳಿದರು: ಇವರು ಸ್ವರ್ಗ ಗಳಿಸುವರು ಎಂದು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–155)

ಹಝ್ರತ್ ಸಯೀದ್ ಬಿನ್ ಝೈದ್(ರ) ವರದಿ ಮಾಡುತ್ತಾರೆ ನಾನು 9 ಜನರ ಪೈಕಿ ಸಾಕ್ಷಿ ಹೇಳುವುದೇನೆಂದರೆ ಅವರು ಸ್ವರ್ಗೀಯರಾಗುವರು ಒಂದು ವೇಳೆ ನಾನು 10 ಜನರ ಪೈಕಿ ಹೀಗೆ ಸಾಕ್ಷೀ ಹೇಳಿದರೂ ನಾನು ಪಾಪಿಷ್ಟನಾಗುವುದಿಲ್ಲ. ಹೇಳಲಾಯಿತು ಅದು ಹೇಗೆ? ಆಗ ಅವರು ಹೇಳಿದರು ನಾವು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರೊಂದಿಗೆ ಹಿರಾ ಬೆಟ್ಟದ ಮೇಲಿದ್ದಾಗ ಅದು ಅಲ್ಲಾಡಲು ಪ್ರಾರಂಭವಾಯಿತು. ಇದಕ್ಕೆ ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಎಲೈ ಹಿರಾ ಬೆಟ್ಟವೇ ನಿಲ್ಲು!! ನಿಸ್ಸಂದೇಹವಾಗಿಯು ನಿನ್ನ ಮೇಲೆ ನಬಿ, ಸಿದ್ದೀಖ್ ಹಾಗೂ ಶಹೀದ್ ಇರುವರು. ಯಾರೊಬ್ಬರು ಕೇಳಿದರು ಆ 10 ಜನರು ಯಾರು? ಎಂದು. ಹಝ್ರತ್ ಸಯೀದ್ ಬಿನ್ ಝೈದ್(ರ) ಹೇಳಿದರು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್, ಅಬೂಬಕ್ಕರ್(ರ), ಉಮರ್(ರ), ಉಸ್ಮಾನ್(ರ), ಅಲಿ(ರ), ತಲ್‌ಹ(ರ), ಝುಬೈರ್(ರ), ಸಅದ್(ರ) ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್(ರ) ಆಗಿದ್ದಾರೆ. ಮತ್ತೆ ಹೇಳಲಾಯಿತು ಆ 10ನೇ ವ್ಯಕ್ತಿ ಯಾರು ಎಂದು. ಆಗ ಹಝ್ರತ್ ಸಯೀದ್ ಬಿನ್ ಝೈದ್(ರ) ಹೇಳಿದರು ನಾನು. (ಸನನ್ ಅಬ್ವಾಬುತ್ತಿರ್‌ಮಿಝೀ ಅಬ್ವಾಬುಲ್ ಮನಾಖಿಬ್ ಹದೀಸ್–3757, ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–478, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಸಅದ್ ಬಿನ್ ಝುಬೈರ್(ರ) ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ), ಹಝ್ರತ್ ತಲ್‌ಹ(ರ), ಹಝ್ರತ್ ಝುಬೈರ್(ರ), ಹಝ್ರತ್ ಸಅದ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಸಯೀದ್ ಬಿನ್ ಝೈದ್(ರ) ಯುದ್ಧ ಭೂಮಿಯಲ್ಲಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮುಂದೆ ಇರುತ್ತಿದ್ದರು ಅಂದರೆ ರಸೂಲ್(ರ) ರವರ ರಕ್ಷಣೆಗಾಗಿ ಇರುತ್ತಿದ್ದರು ಮತ್ತು ನಮಾಝಿನಲ್ಲಿ ಅವರ ಹಿಂದೆ ಇರುತ್ತಿದ್ದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–478, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಹಕೀಮ್ ಬಿನ್ ಮುಹಮ್ಮದ್‌ರವರು ಅವರ ತಂದೆಯಿಂದ ವರದಿ ಮಾಡುತ್ತಾರೆ ಅವರು ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ಉಂಗುರದಲ್ಲಿ ಪವಿತ್ರ ಖುರ್‌ಆನಿನ ವಚನ ಬರೆದಿರುವುದನ್ನು ಕಂಡಿದ್ದರು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–294, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಸಿರಿಯಾದಲ್ಲಿ ಯುದ್ಧಕ್ಕೆ ಸೈನ್ಯವನ್ನು ಕಳುಹಿಸಿದಾಗ ಹಝ್ರತ್ ಸಯೀದ್ ಬಿನ್ ಝೈದರನ್ನು ಹಝ್ರತ್ ಅಬೂ ಉಬೈದರ ಅಧೀನದಲ್ಲಿ ಕಾಲಾಳು ಸೈನ್ಯದ ಒಬ್ಬ ಅಧಿಕಾರಿಯಾಗಿ ನೇಮಿಸಲಾಗಿತ್ತು. ಡಮಾಸ್ಕಸ್‌ಗೆ ಮುತ್ತಿಗೆ ಹಾಕಿದಾಗ ಮತ್ತು ಯರ್‌ಮೂಕಿನ ನಿರ್ಣಾಯಕ ಯುದ್ಧದಲ್ಲಿ ಅವರು ಶೌರ್ಯದಿಂದಲೂ ಆತ್ಮ ಸಮರ್ಪಣೆಯಿಂದಲೂ ಭಾಗವಹಿಸಿದ್ದರು. ಯುದ್ಧದ ಸಂದರ್ಭದಲ್ಲಿ ಹಝ್ರತ್ ಸಯೀದ್ ಬಿನ್ ಝೈದ್(ರ) ರವರನ್ನು ಡಮಾಸ್ಕಸ್‌ನ ಗವರ್ನರ್ ಎಂದು ನೇಮಿಸಲಾಯಿತು. ಆದರೆ ಅವರು ಹಝ್ರತ್ ಅಬೂ ಉಬಾದಹ್(ರ) ಅವರಿಗೆ ನಾನು ಹೀಗೆ ಮಾಡಲು ಸಾಧ್ಯವಿಲ್ಲ ನೀವೆಲ್ಲರು ಜಿಹಾದ್ ಮಾಡಿರಿ ಮತ್ತು ನಾನು ಅದರಿಂದ ವಂಚಿತನಾಗಿ ಕುಳಿತುಕೊಳ್ಳುವುದಿಲ್ಲ ಎಂದು ಬರೆದರು. ಆದ್ದರಿಂದ ಪತ್ರ ತಲುಪಿದ ತಕ್ಷಣ ಬೇರೆ ಯಾರಿಗಾದರು ನನ್ನ ಜಾಗಕ್ಕೆ ಕಳುಹಿಸಿರಿ. ನಾನು ನಿಮ್ಮ ಬಳಿ ಅತೀ ಶೀಘ್ರವಾಗಿ ತಲುಪುವೆನು. ತದನಂತರ ಹಝ್ರತ್ ಅಬೂ ಉಬಾದಹ್(ರ) ವಿವಶರಾಗಿ ಯಝೀದ್ ಬಿನ್ ಅಬೂ ಸುಫಿಯಾನ್‌ರವರನ್ನು ಕಳುಹಿಸಿದರು ಮತ್ತು ಹಝ್ರತ್ ಸಯೀದ್ ಬಿನ್ ಝೈದ್(ರ) ರವರನ್ನು ಮತ್ತೊಮ್ಮೆ ಯುದ್ಧದಲ್ಲಿ ಸೇರಿಸಿಕೊಂಡರು.
(ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–164, ಸೈರುಸ್ಸಹಾಬ ಸಂಪುಟ–2, ಪುಟ–138, ದಾರುಲ್ ಇಶಾಅತ್)

ಹಝ್ರತ್ ಸಯೀದ್ ಬಿನ್ ಝೈದರ ಮುಂದೆಯೇ ಅನೇಕ ಕ್ರಾಂತಿದಾಯಕ ಬದಲಾವಣೆಗಳು ಸಂಭವಿಸಿದುವು. ಹಲವಾರು ಅಂತಃ ಕಲಹಗಳು ನಡೆದುವು. ಅವರು ತಮ್ಮ ಭಯಭಕ್ತಿಯ ಕಾರಣದಿಂದ ಆ ಜಗಳಗಳಿಂದ ದೂರ ಸರಿದಿದ್ದರು. ಆದರೂ ಅವರು ಯಾರ ಬಗ್ಗೆಯಾದರೂ ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ಹೇಳಲು ಹಿಂಜರಿಯುತ್ತಿರಲಿಲ್ಲ. ಹಝ್ರತ್ ಉಸ್ಮಾನ್(ರ) ಶಹೀದ್ ಆದಾಗ ಅವರು ಸಾಮಾನ್ಯವಾಗಿ ಕೂಫದ ಮಸೀದಿಯಲ್ಲಿ ಹೇಳುತ್ತಿದ್ದರು ನೀವೆಲ್ಲರು ಉಸ್ಮಾನರೊಂದಿಗೆ ವರ್ತಿಸಿದ ರೀತಿಯನ್ನು ಕಂಡು ಉಹುದ್ ಬೆಟ್ಟವೂ ಪಲ್ಲಟಗೊಂಡರೆ ಅದರಲ್ಲಿ ಯಾವ ವಿಚಿತ್ರವೂ ಇಲ್ಲ.
(ಸೈರುಸ್ಸಹಾಬ ಸಂಪುಟ–2, ಪುಟ–139)

ಅದೇ ರೀತಿ ಒಮ್ಮೆ ಕೂಫದ ಜಾಮಿಯ ಮಸೀದಿಯಲ್ಲಿ ಮುಗ್ಯೆರ ಬಿನ್ ಶುಬ ಹಝ್ರತ್ ಅಲಿ(ರ) ರವರ ವೈಭವದ ಬಗ್ಗೆ ಕೆಟ್ಟದಾಗಿ ಮಾತನಾಡಿದಾಗ ಹಝ್ರತ್ ಸಯೀದ್ ಬಿನ್ ಝೈದ್(ರ) ಹೇಳಿದರು ಎಲೈ ಮುಗ್ಯೆರ ಬಿನ್ ಶುಬ!! ಎಲೈ ಮುಗ್ಯೆರ ಬಿನ್ ಶುಬ!! ಎಲೈ ಮುಗ್ಯೆರ ಬಿನ್ ಶುಬ!! ನಾನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಹೀಗೆ ಹೇಳುತ್ತಿದ್ದನ್ನು ಆಲಿಸಿರುವೆನು ಅಂದರೆ 10 ಜನರು ಸ್ವರ್ಗದ ನಿವಾಸಿ ಆಗಿರುವರು ಅದರಲ್ಲಿ ಓರ್ವರು ಹಝ್ರತ್ ಅಲಿ(ರ) ಆಗಿದ್ದರು.

(ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–165)

ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ಮೇಲೆ ಒಮ್ಮೆ ಭೂಮಿಯನ್ನು ಅಕ್ರಮಿಸಿಕೊಂಡಿದ್ದಾರೆ ಎಂದು ಆರೋಪಿಸಲಾಯಿತು ಅದರ ವಿವರ ಹೀಗಿದೆ: ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ಭೂಮಿಯೊಂದಿಗೆ ಇದ್ದ ಇನ್ನೊಂದು ಭೂಮಿಯ ಓರ್ವ ಮಹಿಳೆ ಉರ್ವ ಬಿನ್ತ್ ಉವೈಸ್ ಇದ್ದಳು. ಆಕೆ ಹಝ್ರತ್ ಮುಆವಿಯಾ(ರ) ರವರು ನಿಯೋಜಿಸಿದ ಮದೀನದ ಗವರ್ನರ್ ಮರ್ವಾನ್ ಬಿನ್ ಹಕಮ್‌ರವರ ಬಳಿ ದೂರು ದಾಖಲಿಸಿದಳು. ಸಯೀದ್‌ರವರ ಭೂಮಿಯನ್ನು ಅಕ್ರಮವಾಗಿ ತೆಗೆದುಕೊಂಡಿದ್ದಾರೆ ಎಂದು. ಮರ್ವಾನರು ಇದರ ತನಿಖೆಗಾಗಿ ಜನರನ್ನು ನಿಯೋಜಿಸಿದಾಗ ಹಝ್ರತ್ ಸಯೀದ್ ಬಿನ್ ಝೈದ್(ರ) ಉತ್ತರಿಸಿದರು ನಿಮ್ಮ ಅಭಿಪ್ರಾಯ ಏನಾಗಿದೆ ನಾನು ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮರಿಂದ ಆಲಿಸಿದ ನಂತರ ದೌರ್ಜನ್ಯ ಎಸೆಯಲು ಸಾಧ್ಯವೇ? ಅಂದರೆ ಯಾರು ಅಕ್ರಮವಾಗಿ ಒಂದು ಗೇಣು ಭೂಮಿಯನ್ನು ಪಡೆದರು ಖಿಯಾಮತ್ ದಿವಸ ಏಳು ಭೂಮಿಗಳು ಆತನ ಕಂಠಾಭರಣ ಆಗುವುದು. ತದನಂತರ ಅವರು ಹೇಳಿದರು ಎಲೈ ಅಲ್ಲಾಹನೇ!! ಒಂದು ವೇಳೆ ಅರ್ವಾ ಸುಳ್ಳು ಹೇಳುತ್ತಿದ್ದರೆ ಅವಳಿಗೆ ಎಲ್ಲಿಯ ತನಕ ಸಾವು ನೀಡಬೇಡ ಎಂದರೆ ಆಕೆಯ ದೃಷ್ಠಿ ಇರಬಾರದು ಮತ್ತು ಆಕೆಯ ಖಬರ್(ಗೋರಿ) ಆಕೆಯ ಮನೆಯ ಬಾವಿ ಆಗಬೇಕು. ಮುಂದೆ ಹೀಗೆ ಬರೆಯಲಾಗಿದೆ ಅರ್ವಾ ದೃಷ್ಠಿಯಿಂದ ಮೊದಲು ವಂಚಿತಳಾದಳು ಅನಂತರ ಒಮ್ಮೆ ಅವಳು ತನ್ನ ಮನೆಯ ಬಾವಿಯಲ್ಲಿ ಬಿದ್ದು ಮೃತಳಾದಳು. ತದನಂತರ ಇದು ನುಡಿಗಟ್ಟಾಯಿತು ಮತ್ತು ಮದೀನದವರು ಹೀಗೆ ಹೇಳುತ್ತಿದ್ದರು **ಅಲ್‌ಮಾಕಲ್ಲಾಹು ಕಮ ಅಲ್‌ಮಾ ಅರ್ವಾ** ಅಂದರೆ ಅಲ್ಲಾಹನು ನಿನಗೆ ಅರ್ವಾಳನ್ನು ಕುರುಡಳನ್ನಾಗಿ ಮಾಡಿದ ರೀತಿಯಲ್ಲಿ ನೀನು ಸಹ ಕುರುಡಳಾಗು ಎಂದು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–477, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–164–165)

ಹಝ್ರತ್ ಸಯೀದ್ ಬಿನ್ ಝೈದ್ ಹಿಜರಿ ವರ್ಷ 50ರಲ್ಲಿ ಅಥವಾ 51ರಲ್ಲಿ ಅಂದಾಜು ಎಪ್ಪತ್ತನೆ ವರ್ಷ ಪ್ರಾಯದಲ್ಲಿ ಅಥವಾ ಕೆಲವರ ಅಭಿಪ್ರಾಯ ಪ್ರಕಾರ ಅದಕ್ಕಿಂತ ಸ್ವಲ್ಪ ಹೆಚ್ಚು ವರ್ಷ ಪ್ರಾಯದಲ್ಲಿ ಜುಮುಅ ದಿನ ನಿಧನ ಹೊಂದಿದರು. ಮದೀನದ ಹೊರಗೆ ಅಖೀಖ್ ಎಂಬಲ್ಲಿ ಅವರ ಮನೆ ಇತ್ತು. ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಜುಮುಅ ನಮಾಝಿಗಾಗಿ ಸಿದ್ಧರಾಗುತ್ತಿದ್ದಾಗ ಹಝ್ರತ್ ಸಯೀದ್ ನಿಧನ ಹೊಂದಿದ ಸಮಾಚಾರ ಅವರಿಗೆ ತಲಪಿತು. ಅವರು ಜಮುಅ ನಮಾಝಿಗೆ ಹೋಗದೆ ಅಖೀಖ್‌ಗೆ ಹೋದರು. ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಮೃತ ಶರೀರಕ್ಕೆ ಸ್ನಾನ ಮಾಡಿಸಿದರು. ಮೃತ ಶರೀರವನ್ನು ಹೆಗಲಲ್ಲಿ ಹೊತ್ತುಕೊಂಡು ಮದೀನಕ್ಕೆ ತರಲಾಯಿತು. ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಜನಾಝ ನಮಾಝ್ ನಿರ್ವಹಿಸಿದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–138, ದಾರುಲ್ ಇಶಾಅತ್ ಕರಾಚಿ, ಫರ್‌ಹಂಗ್ ಸೀರತ್, ಪುಟ–204, ಝುವಾರಿ ಅಕಾಡಮಿ ಕರಾಚಿ 2003)

ಇನ್ನೊಂದು ವರದಿಯ ಪ್ರಕಾರ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ರವರು ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ನಿಧನದ ಸಮಾಚಾರ ತಿಳಿದಾಗ ಅವರು ಜುಮುಅಗೆ ಹೋಗುವುದಕ್ಕೆ ಸಿದ್ಧರಾಗುತ್ತಿದ್ದರು. ಆದರೆ ಈ ಸಮಾಚಾರ ತಿಳಿದು ಬಂದಾಗ ಅವರು ಜುಮುಅಗೆ ಹೋಗದೆ ಅವರ ಆ ಕಡೆ ಹೋದರು ಅವರಿಗೆ ಸ್ನಾನ ಮಾಡಿಸಿದರು, ಸುಗಂಧವನ್ನು ಲೇಪಿಸಿದರು ಮತ್ತು ಅವರ ಜನಾಝ ನಮಾಝ್ ನಿರ್ವಹಿಸಿದರು. ಆದರೆ ಆಯಿಶ ಬಿನ್ತ್ ಸಅದ್ ಹೇಳುತ್ತಾರೆ ಹಝ್ರತ್ ಸಯೀದ್ ಬಿನ್ ಝೈದ್(ರ) ರವರನ್ನು ಹಝ್ರತ್ ಸಅದ್ ಬಿನ್ ಅಬಿ ವಖಾಸ್(ರ) ಸ್ನಾನ ಮಾಡಿಸಿದರು ಮತ್ತು ಸುಗಂಧವನ್ನು ಲೇಪಿಸಿ ಮನೇಗೆ ಬಂದು ತಾವು ಸ್ವತಃ ಸ್ನಾನ ಮಾಡಿದರು. ತದನಂತರ ಮನೆಯಿಂದ ಹೊರ ಬಂದು ಹೇಳಿದರು ಹಝ್ರತ್ ಸಯೀದ್ ಬಿನ್ ಝೈದ್(ರ) ರವರನ್ನು ಸ್ನಾನ ಮಾಡಿಸಿದ ಕಾರಣ ನಾನು ಸ್ನಾನ ಮಾಡಲಿಲ್ಲ ಬದಲಿಗೆ ಶಕೆಯ ಕಾರಣ ನಾನು ಸ್ನಾನ ಮಾಡಿರುವುದು. ಹಝ್ರತ್ ಸಯೀದ್ ಬಿನ್ ಝೈದ್(ರ) ರವರ ಜನಾಝ ನಮಾಝ್ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ರವರು ನಿರ್ವಹಿಸಿದರು. ಹಝ್ರತ್ ಸಅದ್ ಬಿನ್ ಅಬಿವಖಾಸ್(ರ) ಮತ್ತು ಅಬ್ದುಲ್ಲಾ ಬಿನ್ ಉಮರ್(ರ) ಇವರಿಬ್ಬರು ಅವರನ್ನು ಖಬರ್‌ನಲ್ಲಿ ಇರಿಸಿದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–478, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003, ಸೈರುಸ್ಸಹಾಬ ಸಂಪುಟ–2, ಪುಟ–138, ದಾರುಲ್ ಇಶಾಅತ್ ಕರಾಚಿ)

ಮದೀನದಲ್ಲಿ ಅವರನ್ನು ದಫನ್ ಮಾಡಲಾಯಿತು. ಹಝ್ರತ್ ಸಯೀದ್ ಬಿನ್ ಝೈದ್ ವಿವಿಧ ಕಾಲಗಳಲ್ಲಿ ಒಟ್ಟು ಹತ್ತು ವಿವಾಹ ಮಾಡಿದ್ದರು. ಅವರ ಪತ್ನಿಯರಿಂದ ಅವರಿಗೆ 13 ಪುತ್ರರು ಮತ್ತು 19 ಪುತ್ರಿಯರು ಜನಿಸಿದರು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–292, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990, ಸೈರುಸ್ಸಹಾಬ ಸಂಪುಟ–2, ಪುಟ–140, ದಾರುಲ್ ಇಶಾಅತ್ ಕರಾಚಿ)

ಇನ್ನು ನಾನು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸುವೆನು. ಅಜ್ಞಾನ ಕಾಲದಲ್ಲಿ ಅವರ ಹೆಸರು ಅಬ್ದು ಅಮರ್ ಎಂದಾಗಿತ್ತು. ಇನ್ನೊಂದು ವರದಿ ಪ್ರಕಾರ ಅವರ ಹೆಸರು ಅಬ್ದುಲ್ ಕಅಬ ಎಂದಾಗಿತ್ತು. ಅವರು ಮುಸ್ಲಿಮರಾದಾಗ ಅವರ ಹೆಸರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದಲಾಯಿಸಿ ಅಬ್ದುರ್ರಹ್ಮಾನ್ ಎಂದು ಇರಿಸಿದರು. ಅವರು ಬನೂ ಝುಹ್ರ ಬಿನ್ ಕಿಲಾಬ್ ಗೋತ್ರಕ್ಕೆ ಸೇರಿದ್ದರು. (ಅತ್ತಬಖತುಲ್ ಕುಬ್ರ ಸಂಪುಟ–3, ಪುಟ–92, ಅಬ್ದುರ್ರಹ್ಮಾನ್ ಬಿನ್ ಔಫ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಸಹ್‌ಲ ಬಿನ್ತ್ ಆಸಿಮ್ ಹೇಳುತ್ತಾರೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಬಿಳಿ ವರ್ಣ ಮತ್ತು ಸುಂದರ ಕಣ್ಣುಗಳುಳ್ಳವರಾಗಿದ್ದರು. ಅಗಲವಾದ ರೆಪ್ಪೆಗಳನ್ನೂ ನೀಳವಾದ ಮೂಗನ್ನೂ ಹೊಂದಿದ್ದರು. ಕಿವಿಗಳ ಕೆಳಗಿನ ತನಕ ತಲೆಗೂದಲು ಹೊಂದಿದ್ದರು. ಕೊರಳು ನೀಳವಾಗಿತ್ತು. ಅಂಗೈಗಳು ಬಲಿಷ್ಠವಾಗಿ ಬೆರಳುಗಳು ತೋರವಾಗಿದ್ದವು. (ಅಲ್ ಇಸ್ತಿಯಾಬ ಸಂಪುಟ–2, ಪುಟ–847, ದಾರುಲ್ ಜೀಲ್ ಬೈರೂತ್)

ಇಬ್ರಾಹೀಮ್ ಬಿನ್ ಸಅದ್ ತಮ್ಮ ತಂದೆಯವರಿಂದ ವರದಿ ಮಾಡುತ್ತಾರೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಎತ್ತರವಾಗಿದ್ದರು, ಬಿಳಿ ವರ್ಣ ಅದರಲ್ಲಿ ಕೆಂಪು ಬಣ್ಣ ಮಿಶ್ರಿತವಾಗಿತ್ತು, ಸೌಂದರ್ಯವಂತ, ಮೃದು ಚರ್ಮ ಹೊಂದಿದ್ದರು. ಅವರು ಖಝಾಬ್ (ಕಡತಗಳಿಗೆ ಲೇಪಿಸುವ ಬಣ್ಣ) ಉಪಯೋಗಿಸ ಬಯಸುತ್ತಿರಲಿಲ್ಲ. ಅವರ ಬಗ್ಗೆ ಹೇಳಲಾಗುವುದೇನೆಂದರೆ ಅವರು ಕುಂಟುತ್ತಿದ್ದರು. ಅದು ಉಹುದ್ ಯುದ್ಧದ ನಂತರ ಆಯಿತು. ಏಕೆಂದರೆ ಅವರು ಉಹುದ್ ಯುದ್ಧದಲ್ಲಿ ಗಾಯಗೊಂಡಿದ್ದರು.

(ಅಲ್‌ಇಸ್ತಿಯಾಬ್ ಫೀ ತಮೀಝಿಸ್ಸಹಾಬ ಸಂಪುಟ–4, ಪುಟ–292, ದಾರುಲ್ ಕುತುಬ್ ಇಲ್‌ಮಿ ಬೈರೂತ್ 1995)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ತಮ್ಮ ಜೀವಿತ ಕಾಲದಲ್ಲಿಯೇ ಸ್ವರ್ಗ ಲಭಿಸುವುದಾಗಿ ಶುಭವಾರ್ತೆ ಪಡೆದ ಹತ್ತು ಸಹಾಬರಲ್ಲಿ ಅವರು ಒಬ್ಬರಾಗಿದ್ದರು. ಹಝ್ರತ್ ಉಮರ್ ತನ್ನ ನಂತರ ಖಲೀಫರನ್ನು ಆಯ್ಕೆ ಮಾಡಲು ನಿಶ್ಚಯಿಸಿದ ಅಸ್‌ಹಾಬೆ ಶೂರಾದ ಆರು ಜನರಲ್ಲಿ ಅವರು ಒಬ್ಬರಾಗಿದ್ದರು. ಹಝ್ರತ್ ಉಮರ್ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣದ ವೇಳೆಯಲ್ಲಿ ಈ ಆರು ಜನರ ಬಗ್ಗೆ ತನ್ನ ತೃಪ್ತಿಯನ್ನು ಸೂಚಿಸಿದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಸಂಪುಟ–4, ಪುಟ–290, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಆಮುಲ್‌ಫೀಲ್ ಎಂದು ಕರೆಯಲ್ಪಡುವ ವರ್ಷದ ನಂತರ ಹತ್ತು ವರ್ಷ ಕಳೆದಾಗ ಜನಿಸಿದವರಾಗಿದ್ದರು. ಅಜ್ಞಾನ ಕಾಲದಲ್ಲಿ ಸಹ ಮದ್ಯವನ್ನು ನಿಷಿದ್ಧವಾಗಿ ಗಣಿಸಿದ ಬಹಳ ಕಡಿಮೆ ಸಂಖ್ಯೆಯ ಜನರಲ್ಲಿ ಅವರು ಒಬ್ಬರಾಗಿದ್ದರು. ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಪ್ರಥಮ ಎಂಟು ಜನರಲ್ಲಿ ಅವರು ಒಬ್ಬರಾಗಿದ್ದರು. ಪ್ರವಾದಿ ಮುಹಮ್ಮದ್(ಸ) ರವರು ದಾರೆ ಅರ್ಖಮ್ ತಬ್‌ಲೀಗಿನ ಕೇಂದ್ರವಾಗಿಸಿದಾಗ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅದಕ್ಕು ಮುಂಚೆ ಹಝ್ರತ್ ಅಬೂಬಕ್ಕರ್(ರ) ರವರ ತಬ್ಲೀಗಿನಿಂದ ಮುಸ್ಲಿಮರಾಗಿದ್ದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದ ಎರಡು ತಂಡಗಳಲ್ಲೂ ಇದ್ದರು. (ರೌಶನ್ ಸಿತಾರೆ, ಪುಟ–103–104, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–92, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಸಹೀಹ್ ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ವರದಿ ಮಾಡುತ್ತಾರೆ: ನಾವು ಮದೀನಕ್ಕೆ ಆಗಮಿಸಿದಾಗ ರಸೂಲುಲ್ಲಾಹ್(ರ) ರು ನನ್ನ ಹಾಗೂ ಸಅದ್ ಬಿನ್ ರಬೀಅ್(ರ) ರವರ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದರು. ಆಗ ಸಅದ್ ಬಿನ್

ರಬೀಅ್(ರ) ಹೇಳಿದರು ನಾನು ಅನ್ಸಾರ್‌ಗಳಲ್ಲಿ ಹೆಚ್ಚು ಶ್ರೀಮಂತನಾಗಿದ್ದೇನೆ. ಆದ್ದರಿಂದ ನನ್ನ ಸಂಪತ್ತಿನ ಅರ್ಧ ಭಾಗ ನಿಮಗೆ ನೀಡುತ್ತೇನೆ ಮತ್ತು ನನ್ನ ಇಬ್ಬರು ಪತ್ನಿಯರಲ್ಲಿ ನಿಮಗೆ ಯಾರಾದರು ಇಷ್ಟವಿದ್ದಲ್ಲಿ ಆಕೆಯನ್ನು ನಿಮಗಾಗಿ ತ್ಯಜಿಸುವೆನು ಎಂದರು. ಅವರ ಇದ್ದತ್ ಕಾಲ ಮುಗಿದ ನಂತರ ನೀವು ಅಕೆಯೊಂದಿಗೆ ವಿವಾಹ ಆಗಬಹುದು. ಅಗ ಅವರು ಹೇಳಿದರು ಇದರ ಅವಶ್ಯಕತೆ ಇಲ್ಲ. ನೀವು ನನಗೆ ಕೇವಲ ಇಲ್ಲಿ ವ್ಯಾಪಾರ ಮಾಡಲು ಮಾರುಕಟ್ಟೆ ಇದೆಯೇ ಎಂದು ಹೇಳಿರಿ. ಅದಕ್ಕೆ ಹಝ್ರತ್ ಸಅದ್ ಹೇಳಿದರು ಇಲ್ಲಿ ಖೈನಖಾದವರ ಮಾರುಕಟ್ಟೆ ಇದೆ ಎಂದರು. ಹಝ್ರತ್ ಅಬ್ದುರ್ರಮಾನ್ ಮುಂಜಾನೆ ಅಲ್ಲಿಗೆ ಹೋಗಿ ಪನೀರ್ ಮತ್ತು ತುಪ್ಪ ತಂದರು. ಅದೇ ರೀತಿ ದಿನಾಲು ಅಲ್ಲಿಗೆ ಹೋಗುತ್ತಿದ್ದರು. ಒಮ್ಮೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದಾಗ ಅವರಲ್ಲಿ ಝುಅಫರಾನ್ (ಕೇಸರಿ) ಚಿಹ್ನೆ ಇತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ನೀವು ವಿವಾಹ ಮಾಡಿರುವಿರೋ? ಅವರು ಹೇಳಿದರು: ಹೌದು, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ವಧು ಯಾರು? ಅವರು ಹೇಳಿದರು: ಒಬ್ಬ ಅನ್‌ಸಾರಿ ಮಹಿಳೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ಎಷ್ಟು ಮಹರ್ ನೀಡಿದಿರಿ? ಅವರು ಹೇಳಿದರು: ಒಂದು ಖರ್ಜೂರದ ಬೀಜದಷ್ಟು ಬಂಗಾರ ನೀಡಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ವಲೀಮ ಸತ್ಕಾರ ಏರ್ಪಡಿಸಿರಿ ಒಂದು ಆಡಿನ ಮಾಂಸ ಬಳಸಿಯಾದರೂ ಸರಿ. (ಸಹೀಹ್ ಬುಖಾರಿ ಕಿತಾಬುಲ್ ಬುಯೂ, ಹದೀಸ್–2048)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ವರದಿ ಮಾಡುತ್ತಾರೆ ನಾನು ನನ್ನನ್ನು ಸ್ವತಃ ಎಂತಹ ಪರಿಸ್ಥಿತಿಯಲ್ಲಿ ಕಂಡಿದ್ದೇನೆ ಎಂದರೆ ನಾನು ಯಾವುದಾದರು ಕಲ್ಲನ್ನು ಎತ್ತಿದರೂ ಸಹ ಅದರ ಅಡಿಯಲ್ಲಿ ಚಿನ್ನವನ್ನು ಬಯಸುತ್ತಿದ್ದೆ. ಅಂದರೆ ಅಲ್ಲಾಹನು ವ್ಯಾಪಾರದಲ್ಲಿ ಇಷ್ಟು ಬರ್‌ಕತ್ ನೀಡಿದ್ದನು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–93, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರವರು ಬದರ್ ಉಹುದ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಭಾಗವಹಿಸಿದರು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–93, ದಾರುಲ್ ಕುತುಬ್ ಇಲ್ಮಿಯಾ ಬೈರೂತ್ 1990)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರಿಂದ ವರದಿ ಮಾಡುತ್ತಾರೆ. ಅವರು ಹೇಳಿದರು: ನಾನು ಬದರ್ ಯುದ್ಧದ ಸಂದರ್ಭದಲ್ಲಿ ಸೈನಿಕರ ಸಾಲಿನಲ್ಲಿ ನಿಂತಿದ್ದಾಗ ನನ್ನ ಎಡ ಬಲಗಳ ಕಡೆಗೆ ನೋಡಿದೆನು. ನನ್ನ ಎಡ ಬಲಗಳಲ್ಲಿ ಅನ್‌ಸಾರಿ ಹುಡುಗರು ನಿಂತಿದ್ದರು. ಅವರ ಪ್ರಾಯ ಚಿಕ್ಕದಾಗಿತ್ತು. ನನ್ನೊಂದಿಗೆ ಇವರಿಗಿಂತ ಬಲಿಷ್ಠರಾದ ಯುವಕರು ನಿಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನಾನು ಯೋಚಿಸಿದೆ. ಅಷ್ಟರಲ್ಲಿ ಒಬ್ಬ ಹುಡುಗ ತನ್ನ ಕೈಯಿಂದ ನನ್ನನ್ನು ಒತ್ತಿ ಕೇಳಿದನು. ಚಾಚ, ತಾವು ಅಬುಜಹಲನನ್ನು ಗುರುತಿಸಬಲ್ಲಿರಾ? ನಾನು ಹೇಳಿದೆ ನಿನಗೆ ಅವನೊಂದಿಗೆ ಏನು ಕೆಲಸವಿದೆ? ಆ ಹುಡುಗ ಹೇಳಿದ: "ಅಬೂಜಹಲ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸುತ್ತಿದ್ದನು ಎಂದು ನಾನು ಕೇಳಿರುವೆನು. ನಾನು ಅವನನ್ನು ನೋಡಿದರೆ ನಮ್ಮಿಬ್ಬರಲ್ಲಿ ಯಾರ ಜೀವಿತ ಕಾಲ ಮುಂದಾಗಿ ವಿಧಿಸಲ್ಪಟ್ಟಿದೆಯೋ ಅವನು ಮೃತನಾಗುವ ತನಕ ನನ್ನ ಕಣ್ಣುಗಳು ಅವನಿಂದ ದೂರ ಸರಿಯಲಾರದು." ಆಗ ನನಗೆ ಆಶ್ಚರ್ಯವಾಯಿತು. ಇನ್ನೊಬ್ಬ ಹುಡುಗ ಸಹ ಅದೇ ರೀತಿ ಕೇಳಿದನು. ಅಷ್ಟರೊಳಗೆ ಅಬೂಜಹಲನು ಜನರ ಮಧ್ಯೆ ತಿರುಗಾಡುತ್ತಾ ಇರುವುದಾಗಿ ಕಂಡೆನು. ಆಗ ನಾನು ಹೇಳಿದೆ ನೀವು ಯಾರ ಬಗ್ಗೆ ವಿಚಾರಿಸುತ್ತಿರುವಿರೋ ಅವನೇ ಆತ. ನನ್ನ ಮಾತು ಆಲಿಸಿದ ಕೂಡಲೆ ಆ ಹುಡುಗರಿಬ್ಬರೂ ತಮ್ಮ ಖಡ್ಗ ಹಿಡಿದು ಅಬೂಜಹಲನ ಕಡೆಗೆ ನೆಗೆದು ಅವನನ್ನು ಖಡ್ಗಗಳಿಂದ ಕಡಿದು ಹಾಕಿ ಕೊಂದು ಬಿಟ್ಟರು. ಅನಂತರ ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದು ಆ ವಿಷಯ ತಿಳಿಸಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನಿಮ್ಮಿಬ್ಬರಲ್ಲಿ ಅವನನ್ನು ಕೊಂದವನು ಯಾರು? ಅವರಿಬ್ಬರೂ ನಾನು ಎಂದು ಹೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀವು ನಿಮ್ಮ ಖಡ್ಗಗಳನ್ನು ಒರಸಿ ಸ್ವಚ್ಛಗೊಳಿಸಿರುವಿರೋ? ಅವರು ಹೇಳಿದರು: ಇಲ್ಲ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಡ್ಗಗಳನ್ನು ನೋಡಿದರು. ಅವರು ಹೇಳಿದರು: ನೀವಿಬ್ಬರೂ ಅಬೂಜಹಲನನ್ನು ಕೊಂದಿರುವಿರಿ. ಮತ್ತೆ ಹೇಳಿದರು ಅವನ ಸಂಪತ್ತು ಮುಆಝ್ ಬಿನ್ ಉಮ್ರೋ ಬಿನ್ ಜಮೂಹ್‌ಗೆ ಸಿಗುವುದು. ಅವರಿಬ್ಬರ ಹೆಸರು ಮುಆಝ್ ಆಗಿತ್ತು. ಮುಆಝ್ ಬಿನ್ ಅಫ್‌ರಾ ಮತ್ತು ಮುಆಝ್ ಬಿನ್ ಉಮ್ರೋ ಬಿನ್ ಜಮೂಹ್ ಆಗಿತ್ತು ಇದು ಸಹೀಹ್ ಬುಖಾರಿಯ ವರದಿ ಆಗಿದೆ.

ಕೆಲವು ವರದಿಗಳ ಪ್ರಕಾರ ಇಖ್‌ರಾನ ಇಬ್ಬರು ಪುತ್ರರಾದ ಮುಆಝ್ ಹಾಗೂ ಮುಅವ್ವಿಝ್ ಅವರಿಬ್ಬರು ಅಬೂಜಹಲ್‌ನನ್ನು ಮೃತ್ಯುವಿಗೆ ಸಮೀಪಗೊಳಿಸಿದರು. ಅನಂತರ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅಬೂಜಹಲ್‌ನ ಶಿರವನ್ನು ದೇಹದಿಂದ ಬೇರ್ಪಡಿಸಿದರು. ಅಲ್ಲಾಮ ಇಬ್ನೆ ಹಜರ್ ಅಸ್‌ಖಲಾನಿರವರು ಹೇಳುತ್ತಾರೆ: ಮುಆಝ್ ಬಿನ್ ಉಮ್ರೊ ಮತ್ತು ಮುಆಝ್ ಬಿನ್ ಅಫ್ರಾ ನಂತರ ಮುಅವ್ವಿಝ್ ಬಿನ್ ಇಫ್ರಾ ಸಹ ಅಬೂಜಹಲ್‌ನನ್ನು ಅಕ್ರಮಿಸಿರಬಹುದು. (ಸಹೀಹ್ ಬುಖಾರಿ ಕಿತಾಬ್ ಫರ್‌ಝುಲ್ ಖಮ್ಸ್, ಹದೀಸ್–3141, ಕಿತಾಬುಲ್ ಮಗಾಝಿ ಹದೀಸ್–3961–3962, ಫತ್‌ಹುಲ್‌ಬಾರಿ ಶರಹ್ ಸಹೀಹ್ ಬುಖಾರಿ ಭಾಗ–7, ಪುಟ–295–296, ಅಲ್‌ಮಕ್ತಬಸ್ಸಲಫೀಯ)

ಈ ಘಟನೆಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳುತ್ತಾರೆ: ಅಬೂಜಹಲ್ ಆತನು ಮಕ್ಕದ ಎಲ್ಲಾ ಮನೆಗಳಿಗೆ ಸರದಾರನಾಗಿದ್ದನು ಮತ್ತು ಕುಫ್ಫಾರರ ಸೈನ್ಯದ ಸೇನಾಧಿಪತಿ ಆಗಿದ್ದನು. ಬದರ್ ಯುದ್ಧದ ಸಂದರ್ಭದಲ್ಲಿ ಆತನು ತನ್ನ ಸೈನ್ಯವನ್ನು ಸಿದ್ಧ ಪಡಿಸುತ್ತಿರುವಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರು ಹೇಳುತ್ತಾರೆ: ಯುದ್ಧ ಪ್ರಾರಂಭವಾಗುತ್ತಿರುವಾಗ ನಾನು ಬದರ್ ಯುದ್ಧದ ಸಂದರ್ಭದಲ್ಲಿ ಸೈನಿಕರ ಸಾಲಿನಲ್ಲಿ ನಿಂತಿದ್ದಾಗ ಎಡ ಬಲಗಳ ಕಡೆಗೆ ನೋಡಿದೆನು. ನನ್ನ ಎಡ ಬಲಗಳಲ್ಲಿ ಅನ್‌ಸಾರಿ ಹುಡುಗರು ನಿಂತಿದ್ದರು. ಅವರ ಪ್ರಾಯ ಚಿಕ್ಕದಾಗಿತ್ತು. ನನ್ನೊಂದಿಗೆ ಇವರಿಗಿಂತ ಬಲಿಷ್ಠರಾದ ಯುವಕರು ನಿಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನಾನು ಯೋಚಿಸಿದೆ. ಅಷ್ಟರಲ್ಲಿ ಒಬ್ಬ ಹುಡುಗ ತನ್ನ ಕೈಯಿಂದ ನನ್ನನ್ನು ಒತ್ತಿ ಕೇಳಿದನು. ಚಾಚ, ತಾವು ಅಬುಜಹಲನನ್ನು ಗುರುತಿಸಬಲ್ಲಿರಾ? ನಾನು ಹೇಳಿದೆ ನನಗೆ ಅವನೊಂದಿಗೆ ಏನು ಕೆಲಸವಿದೆ? ಆ ಹುಡುಗ ಹೇಳಿದ: "ಅಬೂಜಹಲ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸುತ್ತಿದ್ದನು ಎಂದು ನಾನು ಕೇಳಿರುವೆನು. ನಾನು ಅವನನ್ನು ನೋಡಿದರೆ ನಮ್ಮಿಬ್ಬರಲ್ಲಿ ಯಾರ ಜೀವಿತ ಕಾಲ ಮುಂದಾಗಿ ವಿಧಿಸಲ್ಪಟ್ಟಿದೆಯೋ ಅವನು ಮೃತನಾಗುವ ತನಕ ನನ್ನ ಕಣ್ಣುಗಳು ಅವನಿಂದ ದೂರ ಸರಿಯಲಾರದು." ಆಗ ನನಗೆ ಆಶ್ಚರ್ಯವಾಯಿತು. ಇನ್ನೊಬ್ಬ ಹುಡುಗ ಸಹ ಅದೇ ರೀತಿ ಕೇಳಿದನು. ಅಷ್ಟರೊಳಗೆ ಅಬೂಜಹಲನು ಜನರ ಮಧ್ಯೆ ತಿರುಗಾಡುತ್ತಾ ಇರುವುದಾಗಿ ಕಂಡೆನು. ಆಗ ನಾನು ಹೇಳಿದೆ ನೀವು ಯಾರ ಬಗ್ಗೆ ವಿಚಾರಿಸುತ್ತಿರುವಿರೋ ಅವನೇ ಆತ. ನನ್ನ ಮಾತು ಆಲಿಸಿದ ಕೂಡಲೆ ಆ ಹುಡುಗರಿಬ್ಬರೂ ತಮ್ಮ ಖಡ್ಗ ಹಿಡಿದು ಅಬೂಜಹಲನ ಕಡೆಗೆ ನೆಗೆದು ಅವನನ್ನು ಖಡ್ಗಗಳಿಂದ ಕಡಿದು ಹಾಕಿ ಕೊಂದು ಬಿಟ್ಟರು. ಅಬೂಜಹಲ್ ಮಣ್ಣು ಪಾಲಾದನು. ಇಕ್ರಮ ಬಿನ್ ಅಬೂಜಹಲ್ ಸಹ ತನ್ನ ತಂದೆಯೊಂದಿಗೆ ಇದ್ದನು ಅವರು ತನ್ನ ತಂದೆಯನ್ನು ಉಳಿಸಲು ಸಾಧ್ಯವಾಗಲಿಲ್ಲ ಆದರೆ ಅವನು ಹಿಂದಿನಿಂದ ಮುಆಝ್(ರ) ರವರ ಮೇಲೆ ಅಕ್ರಮಿಸಿ ಅವರ ಕೈಯನ್ನು ಕತ್ತರಿಸಿದನು ಅವರ ಕೈ ನೇತಾಡುತ್ತಿತ್ತು. ಆದರೂ ಮುಆಝ್(ರ) ಇಕ್ರಮನನ್ನು ಹಿಂಬಾಲಿಸಿದರು ಆದರೆ ಅವನು ಓಡಿಹೋದನು. ನೇತಾಡುತ್ತಿದ್ದ ಕೈಯಿಂದ ಯುದ್ಧವಾಡಲು ಕಷ್ಟವಾಗುತ್ತಿದ್ದರಿಂದ ಮುಆಝ್(ರ) ತನ್ನ ಕೈಯನ್ನು ಸ್ವತಃ ಎಳೆದು ಬೇರ್ಪಡಿಸಿಕೊಂಡು ಯುದ್ಧವಾಡುತ್ತಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳುತ್ತಾರೆ: ಬದರ್ ಯುದ್ಧದ ನಂತರ ಜನರು ಮರಳಿ ಹೋಗುತ್ತಾ ಇದ್ದಾಗ ನಾನು ರಣಾಂಗಣದಲ್ಲಿ ಗಾಯಗೊಂಡವರನ್ನು ನೋಡಲು ಹೋಗಿದ್ದೆನು. ನಾನು ರಣಾಂಗಣದಲ್ಲಿ ಅಬೂ ಜಹಲನನ್ನು ಗಾಯಗೊಂಡ ಸ್ಥಿತಿಯಲ್ಲಿ ಗೋಳಾಡುತ್ತಿದ್ದುದಾಗಿ ಕಂಡೆನು. ನಾನು ಅವನ ಸಮೀಪಕ್ಕೆ ತಲಪಿದಾಗ ಅವನು ನನ್ನೊಂದಿಗೆ ಹೇಳಿದನು: ನಾನು ಬದುಕಿ ಉಳಿಯುವುದಾಗಿ ಕಾಣುವುದಿಲ್ಲ. ನೀನು ಸಹ ಮಕ್ಕದವನೇ ಆಗಿರುವೆ. ನಾನು ನಿನ್ನೊಂದಿಗೆ ಅಪೇಕ್ಷಿಸುತ್ತೇನೆ ನೀನು ನನ್ನನ್ನು ಕೊಂದು ಬಿಡು. ನನ್ನ ಕಷ್ಟ ದೂರವಾಗಲಿ. ಆದರೆ ನಿನಗೆ ಗೊತ್ತಿದೆ ನಾನು ಅರೇಬ್ಯದ ನೇತಾರನಾಗಿರುವೆನು. ಅರಬಿ ಸಂಪ್ರದಾಯ ಪ್ರಕಾರ ಮುಖಂಡರಾದ ಜನರ ಕೊರಳುಗಳನ್ನು ತಲೆಯೊಂದಿಗೆ ಕೊರಳು ಉದ್ದವಾಗಿರುವ ರೀತಿಯಲ್ಲಿ ಕಡಿಯಲಾಗುತ್ತದೆ. ಇದು ಕೊಲ್ಲಲ್ಪಟ್ಟವನ ಮುಖಂಡತ್ವದ ಸಾಕ್ಷಿಯಾಗಿರುತ್ತದೆ. ನಾನು ಅಪೇಕ್ಷಿಸುವುದೇನೆಂದರೆ ನೀನು ನನ್ನ ಕೊರಳು ತಲೆಯಿಂದ ಜೋಡಿಸಿ ಉದ್ದವಾಗಿರುವ ಹಾಗೆ ಕತ್ತರಿಸಬೇಕು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳುತ್ತಾರೆ: ನಾನು ಅವನ ಕೊರಳನ್ನು ಗದ್ದದ ಸಮೀಪವಾಗಿ ಕತ್ತರಿಸಿದೆನು ಮತ್ತು ಹೇಳಿದೆ: ನಿನ್ನ ಈ ಕೊನೆಯ ಆಸೆ ಸಹ ಈಡೇರಲಾರದು. ಅಬೂ ಜಹಲನ ಅಂತಿಮ ಗತಿಯ ದೃಷ್ಟಿಯಿಂದ ನೋಡುವುದಾದರೆ ಅವನು ಎಷ್ಟು ಹೀನ ಸ್ಥಿತಿಯಲ್ಲಿ ಕೊಲ್ಲಲ್ಪಟ್ಟನು. ಅವನ ಜೀವಿತ ಕಾಲದಲ್ಲಿ ಅವನ ಕೊರಳು ಯಾವಾಗಲೂ ಎತ್ತರವಾಗಿರುತ್ತಿತ್ತು. ಅವನ ಮೃತ್ಯುವಿನ ಕಾಲದಲ್ಲಿ ಅವನ ಕೊರಳನ್ನು ಗದ್ದದಿಂದ ಕತ್ತರಿಸಲಾಯಿತು.

ಅವನ ಕೊನೆಯ ಅಭಿಲಾಷೆ ಸಹ ಈಡೇರಲಿಲ್ಲ. (ತಫ್‌ಸೀರೆ ಕಬೀರ್, ಸಂಪುಟ–8, ಪುಟ–100–101)

ಹಝ್ರತ್ ಮುಸ್ಲಿಹ್ ಮೌಊದ್(ರ) ಬಲಿದಾನಗಳ ಬಗ್ಗೆ ವಿವರಿಸುತ್ತಿರುವಾಗ ಈ ಘಟನೆಯನ್ನು ಪ್ರಸ್ತಾಪಿಸಿದ್ದಾರೆ. ಹೇಗೆ ಅಂದಿನ ಕಾಲದಲ್ಲಿಯು ಮಕ್ಕಳಲ್ಲಿಯು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಪ್ರೀತಿ ಇತ್ತು ಎಂದು. ಹೇಗೆ ಅವರು ಆ ಪ್ರೀತಿಯ ಕಾರಣದಿಂದ ವೈರಿಗಳಿಂದ ತಮ್ಮ ಸೇಡನ್ನು ತೀರಿಸಿಕೊಳ್ಳುತ್ತಿದ್ದರು.

ಈ ಘಟನೆಯನ್ನು ನಾನು ಅನೇಕ ಸಲ ವಿವರಿಸಿದ್ದೇನೆ ಆದರೆ ಇದೂ ಬಲಿದಾನಗಳಾಗಿದ್ದವು, ಪ್ರೀತಿಯಾಗಿತ್ತು ಮತ್ತು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಇದ್ದ ಪ್ರೀತಿ ಆಗಿತ್ತು. ಅದರ ಕಾರಣದಿಂದ ಅವರಿಗೆ ತಮ್ಮ ಜೀವಗಳ ಬಗ್ಗೆ ಚಿಂತೆ ಇರಲಿಲ್ಲ.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ಸಂಬಂಧಿಸಿ ವಿವರಿಸಲು ಬಾಕಿಯಾಗಿ ಉಳಿದಿರುವ ವಿಷಯಗಳನ್ನು ಇನ್‌ಶಾಅಲ್ಲಾಹ್ ಮುಂದೆ ವಿವರಿಸುವೆನು.

*****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಪ್ರಾರಂಭಿಸುತ್ತಾರೆ ಆದರೆ ನಾನು ಕೇಳುವುದು, ಒಬ್ಬನ ಬದಲಿಗೆ ಇನ್ನೊಬ್ಬನನ್ನು ಶಿಲುಬೆಗೇರಿಸಿದರೆ ಅದು ಯಾವ ನ್ಯಾಯ ಹಾಗು ಕರುಣೆಯಾಯಿತು? ಅವನು ಎಲ್ಲರ ಪಾಪಗಳನ್ನು ಎತ್ತಿಕೊಂಡಿದ್ದಾನೆ. ಜನ್ಮ ಪಡೆದವರೆಲ್ಲರ – ಇದು ಅವರ ತತ್ವ ಎಂದಾಗ ಯಾವ ಕಾರಣಕ್ಕೆ ನಾವು ಪಾಪ ಮಾಡಬಾರದು? ಪಾಪ ಮಾಡಲು ಅಡ್ಡಿ ಏನು? ಅದು ಆ ಕಾಲದ ಕ್ರೈಸ್ತರಿಗೆ ಮಾತ್ರ ಉಪದೇಶವಾಗಿತ್ತು ಎಂದಾಗಿದ್ದರೆ ಆ ಮಾತು ಬೇರೆಯಿತ್ತು. ಆದರೆ ಅಂತ್ಯ ದಿನಿದವರೆಗೆ ಜನ್ಮ ಪಡೆಯುವವರೆಲ್ಲರ ಪಾಪಗಳ ಕಟ್ಟುಗಳನ್ನು ಎತ್ತಿಕೊಂಡನು ಮತ್ತು ಶಿಕ್ಷೆಯನ್ನು ಅನುಭವಿಸಿದನು. ಆದರೂ ಪಾಪಿಗಳನ್ನು ಹಿಡಿಯುವುದೆಂದರೆ ಎಷ್ಟೆಂದೂ ದೌರ್ಜನ್ಯವಾಗಿದೆ. ಮೊದಲನೆಯದಾಗಿ ನಿರಪರಾಧಿಯೊಬ್ಬನಿಗೆ ಅಪರಾಧಿಯ ಬದಲಿಗೆ ಶಿಕ್ಷೆ ನೀಡುವುದೇ ದೌರ್ಜನ್ಯವಾಗಿದೆ. ಅದರ ಮೇಲೆ ಮತ್ತೊಂದು ದೌರ್ಜನ್ಯವೇನೆಂದರೆ ಮೊದಲು ಪಾಪಿಗಳ ಪಾಪಗಳೆಲ್ಲ ಯೇಸೂವಿನ ಶಿರದ ಮೇಲೆ ಹೋರಿಸಲಾಯಿತು ಮತ್ತು ಅವರನ್ನು ಪಾಪಮುಕ್ತ ಮಾಡುವ ಸಂದೇಶ ನೀಡಲಾಯಿತು. ಅವರು ಪಾಪ ಮಾಡಿ ತಪ್ಪಿಸಕೊಳ್ಳುವುದು ಒಂದು ವಿಚಿತ್ರವಾದ ಮೋಸಗಾರಿಕೆಯಾಗಿದೆ. ಅದರ ಉತ್ತರವನ್ನು ಕ್ರೈಸ್ತರು ಎಂದೂ ಕೊಡಲಾರರು.

**(ಮಲ್ಫೂಝಾತ್, ಸಂಪುಟ–1,ಪುಟ–160–162,ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಆತ್ಮೀಯ ಸದಸ್ಯರಾಗಿರುವವರು ಅಲ್ಲದೇ Aachen ಜಮಾಅತಿನ ಹಳೆಯ ಹಾಗೂ ಅರಂಭಿಕ ಸದಸ್ಯರಲ್ಲೊಬ್ಬರಾಗಿದ್ದರು. ಅವರು ಜಮಾಅತಿನ ಸ್ಥಾಪನೆ ಮತ್ತು ಪ್ರಾರಂಭಿಕ ಹಂತದಲ್ಲಿ ತುಂಬ ಶ್ರಮ ಪಡೆದವರು. ಅವರು ಸ್ವಯಂ ಪ್ರಾಥಮಿಕ ಹಂತದಲ್ಲಿ ಅಧ್ಯಕ್ಷರಾಗಿದ್ದರು.

ಇಲ್ಲಿಂದ 6 ಗಂಟೆ 45 ನಿಮಿಷಕ್ಕೆ ಮಸ್ಜಿದ್ ಮನ್ಸೂರ್ Aachen ಗೆ ಪ್ರಯಾಣಿಸಿದರು. ಪೋಲಿಸರ ವಾಹನವು ತಂಡಕ್ಕೆ Esart ನೀಡಿತು. 7 ಗಂಟೆಗೆ ಹುಝೂರ್ “ಮಸ್ಜಿದ್ ಮನ್ಸೂರ್” ಗೆ ಆಗಮಿಸಿದರು. ಆಗ ಜಮಾಅತ್‌ನ ಪುರುಷರು, ಸ್ತ್ರೀಯರು ಮತ್ತು ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಹಾಜರಿದ್ದು ತಮ್ಮ ಪ್ರೀತಿಯ ಇಮಾಮರಿಗೆ ಭವ್ಯ ಸ್ವಾಗತ ಕೋರಿದರು. ಮತ್ತು ತಮ್ಮ ಕೈಗಳನ್ನು ಬೀಸುತ್ತ ಪ್ರಿಯ ಇಮಾಮರಿಗೆ ಶುಭ ಕೋರಿದರು. ಬಾಲಕ ಬಾಲಕಿಯರೂ ಸ್ವಾಗತ ಗೀತೆಗಳನ್ನು ಪ್ರಸ್ತುತಪಡಿಸಿದರು.

ಆ ಸಂದರ್ಭದಲ್ಲಿ Aachen ಸದರ್ ಜಮಾಅತ್ ಮುಕರ್ರಮ್ ಬಶೀರ್ ಅಹ್ಮದ್ ಡೋಗರ್ ಸಾಹಿಬ್ ಹುಝೂರರಿಗೆ ಶುಭಾಗಮನ ಕೋರುತ್ತ ಭೇಟಿಯಾಗುವ ಭಾಗ್ಯ ಪಡೆದರು.

ಇಂದು ಮಸೀದಿಯ ಉದ್ಘಾಟನೆಯಲ್ಲಿ ಭಾಗವಹಿಸಲು ಬಂದ ಅತಿಥಿಗಳಲ್ಲಿ ಲಾರ್ಡ್ ಮೇಯರ್ Mareel Philip, ರಾಜ್ಯ ಸಂಸತ್ ಸದಸ್ಯರು Hon. Schultheis Karl ಮತ್ತು Aachen ನಗರದ ಸಂಸತ್ ಸದಸ್ಯರು Jansen Rjorn ಹುಝೂರರಿಗೆ ಸ್ವಾಗತಿಸಿದರು. ಶುಭಾಗಮನ ಕೋರಿದರು ಮತ್ತು ಹಸ್ತಲಾಘವ ಭಾಗ್ಯ ಪಡೆದರು.

Aachen ನಗರದ ಒಂದು ಕ್ಲಬ್ಬಿನ ಎಂಟು ಕುದುರೆ ಸವಾರರು ತಮ್ಮ ವಿಶಿಷ್ಟ ವೇಷಭೂಷಣದಲ್ಲಿ ಹುಝೂರರಿಗೆ ಸ್ವಾಗತ ಕೋರಲು ಸಿದ್ಧರಾಗಿದ್ದರು. ಅವರು ವಿಶಿಷ್ಟ ರೀತಿಯಲ್ಲಿ ಹುಝೂರರಿಗೆ ಸಲಾಮಿ ನೀಡಿದರು ಮತ್ತು ಶುಭಾಗಮನ ಹೇಳಿದರು. ಆ ಸಂದರ್ಭದಲ್ಲಿ ಮಾಧ್ಯಮದವರ ಛಾಯಾಗಾರರು ಉಪಸ್ಥಿತರಿದ್ದರು. ಅವರು ನಿರಂತರವಾಗಿ ಛಾಯಚಿತ್ರ ತೆಗೆಯುತ್ತಿದ್ದರು.

ಅನಂತರ ಹುಝೂರ್(ಅಬಿಅ) ಮಸೀದಿಯ ಹೊರಗಡೆ ಸ್ಥಾಪಿಸಿದ ಹಲಗೆಯ ಮೇಲಿನ ಪರದೆಯನ್ನು ಅನಾವರಣಗೊಳಿಸಿ ಮಸೀದಿಯ ಉದ್ಘಾಟನೆ ಮಾಡಿದರು. ನಂತರ ದುಆ ಮಾಡಿಸಿದರು. ದುಆದ ನಂತರ ಹುಝೂರ್(ಅಬಿಅ) ಮಸೀದಿಯ ಒಳಭಾಗವನ್ನು ಪ್ರವೇಶಿಸಿ ಝುಹರ್ ಹಾಗೂ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

ಅನಂತರ ಹುಝೂರ್ ಮಸೀದಿಯ ಹೊರಗಡೆ ಬಂದು ಆಲೂಖುಬಾರದ ಸಸ್ಯವನ್ನು ನೆಟ್ಟರು. ಮತ್ತು ಲಾರ್ಡ್ ಮೇಯರ್ Marcel Philipp ಅವರು ಬಾದಾಮ್ ಸಸ್ಯವನ್ನು ನೆಟ್ಟರು.

ಅನಂತರ ಹುಝೂರ್(ಅಬಿಅ) ಮಸೀದಿಯ ಹೊರಗಡೆ ಹಾಕಲಾದ ಮಾರ್ಕಿನೆಡೆಗೆ ತೆರಳಿದರು. ಅಲ್ಲಿ 7 ಗಂಟೆ 15 ನಿಮಿಷಕ್ಕೆ ಮಸೀದಿಯ ಉದ್ಘಾಟನಾ ಸಮಾರಂಭದ ಆರಂಭವು ಖುರ್‌ಆನ್ ಪಠಣದೊಂದಿಗೆ ಆಯಿತು. ಅದನ್ನು ಮುಕರ್ರಮ್ ಸಯ್ಯದ್ ಸುಲೇಮಾನ್ ಶಾಹ್ ಸಾಹಿಬ್ ಮುಬಲ್ಲಿಗ್ ಜರ್ಮನಿ ನೆರವೇರಿಸಿದರು. ಅನಂತರ ಅದರ ಜರ್ಮನ್ ಅನುವಾದ ಮುಕರ್ರಮ್ ಬಿಲಾಲ್ ನಮಾಝ್ ಸಹಿಬ್ ಅದರ ಉರ್ದು ಅನುವಾದ ಮುಕರ್ರಮ್ ಅಝ್‌ಮತ್ ಅಲಿ ಸಾಹಿಬ್ ಪ್ರಸ್ತುತಪಡಿಸಿದರು.

ಅನಂತರ ಮುಕರ್ರಮ್ ಅಬ್ದುಲ್ಲ ವಾಗಸ್ ಹುಝೂರ್ ಸಾಹಿಬ್ (ಅಮೀರ್ ಜಮಾಅತ್ ಜರ್ಮನಿ) ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. Aachen ನಗರದ ಇತಿಹಾಸ ವಿವರಿಸುತ್ತ ಹೇಳಿದರು. Aachen ನಗರವು West ಫಾಲನ್ ರಾಜ್ಯದಲ್ಲಿ ಇದೆ. ಅದು ಜರ್ಮನಿಯ ಎಲ್ಲದಕ್ಕಿಂತ ಹೆಚ್ಚು ಪಶ್ಚಿಮದ ಭಾಗದಲಿದೆ.

ಆ ನಗರದ ಜನಸಂಖ್ಯೆ ಎರಡು ಲಕ್ಷ 51 ಸಾವಿರ ಜನರನ್ನು ಒಳಗೊಂಡಿದೆ. ಹಾಲೆಂಡ್ ಮತ್ತು ಬೆಲ್ಜಿಯಂನ ಗಡಿಗಳು ಈ ನಗರಕ್ಕೆ ಹೊಂದಿಕೊಂಡಿದೆ. ಗಂಧಕ ಮಿಶ್ರಣ ಬಿಸಿ ನೀರಿನ ಸರೋವರಗಳು ಇಲ್ಲಿವೆ. ಸುಮಾರು ಮೂರು ಸಾವಿರ ವರ್ಷ ಮಸೀಹ್ ಪೂರ್ವದಿಂದ ಈ ಕ್ಷೇತ್ರಗಳಲ್ಲಿ ಜನಸಂಖ್ಯೆಯ ಸುಳಿವು ದೊರೆಯುತ್ತವೆ. ಮೊದಲ ಬಾರಿಗೆ ಈ ನಗರದ ದಾಖಲೆ ಪತ್ರ 765 ರಲ್ಲಿ ಸಿಗುತ್ತದೆ.

ರೋಮನ್ ತಮ್ಮ ಕಾಲದಲ್ಲಿ ಸೈನಿಕರಿಗಾಗಿ Thermal Bath ನಿರ್ಮಿಸುತ್ತಿದ್ದರು ಮತ್ತು Corlingian ಕಾಲದಲ್ಲಿ ಈ ನಗರದಲ್ಲಿ ಮೂವತ್ತು ಅರಸರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ್ದರು. ಅದೇ ರೀತಿ ನೆಪೋಲಿಯನ್ ಅವರೂ ಈ ನಗರದಲ್ಲಿ ಬಂದು ನೆಲೆಸಿದ್ದರು.

938 ರಲ್ಲಿ ಜರ್ಮನಿಯ ಪ್ರಥಮ ಅರಸನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ಆ ಸಮಯದಿಂದ 600 ವರ್ಷದವರೆಗೆ Aachen ಜರ್ಮನಿ ರಾಜರ ರಾಜಧಾನಿ ಆಗಿದ್ದಿತು. ಇಲ್ಲಿ ಹಲವು ರಾಜರು ದಫನರಾಗಿದ್ದಾರೆ.

ಇಲ್ಲಿ ಒಂದು ಬಹುದೊಡ್ಡ ವಿಶ್ವವಿದ್ಯಾಲಯವು ಇದೆ. ಈ ನಗರದಲ್ಲಿ 50 ಸಾವಿರ ವಿದ್ಯಾರ್ಥಿಗಳು ವಿದ್ಯೆ ಪಡೆಯುತ್ತಿದ್ದಾರೆ.

ಈ ಕ್ಷೇತ್ರದಲ್ಲಿ 1977 ರಲ್ಲಿ ಅಹ್ಮದಿಯರು ಬಂದು ನೆಲೆಸಿದ್ದರು. 1978 ರಲ್ಲಿ ವಿಧಿಬದ್ಧ ರೀತಿಯಲ್ಲಿ ಜಮಾಅತ್ ಸ್ಥಾಪನೆಗೊಂಡಿತು. ಇದೀಗ 700 ಕ್ಕಿಂತ ಹೆಚ್ಚಿನ ಜನರು ಒಳಗೊಂಡ ಜಮಾಅತ್ ಆಗಿದೆ. ಅಹ್ಮದಿ ವಿದ್ಯಾರ್ಥಿಗಳು ವಿವಿಧ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿಯ ಜಮಾಅತ್ ಈದ್ ಮಿಲನ್ ಪಾರ್ಟಿಗಳು, Religious fouder’s day, ಪವಿತ್ರ ಖುರ್‌ಆನಿನ ಪ್ರದರ್ಶನವನ್ನು ಏರ್ಪಡಿಸುತ್ತಾರೆ. ಜನವರಿ ಒಂದರಂದು ಹೊಸ ವರ್ಷದ ಅಂಗವಾಗಿ ಸ್ವಚ್ಛತಾ ಕಾರ್ಯ ಹಾಗೂ ಸಸ್ಯ ನೆಡುವಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಇಲ್ಲಿ ಮಸೀದಿ ನಿರ್ಮಾಣಕ್ಕಿಂತ ಮೊದಲು ಹಲವು ಕಾರ್ಯಕ್ರಮಗಳಾಗಿವೆ. ನೆರೆಹೊರೆಯರ ಆತಂಕಗಳನ್ನು ದೂರ ಮಾಡಲಾಗಿದೆ. ಚರ್ಚಿನಲ್ಲಿಯೂ ಒಂದು ದೊಡ್ಡ ಸಮಾರಂಭ ನೆರವೇರಿಸಿದ್ದಾರೆ. ನಮ್ಮ ಖಲೀಫರು ಚರ್ಚಿನಲ್ಲಿ ಜುಮಾ ನಮಾಝ್ ನಿರ್ವಹಿಸಿಕೊಟ್ಟಿರುತ್ತಾರೆ. ಇದೀಗ ಇಲ್ಲಿಯ ಜನರಿಗೆ ಮನದಟ್ಟಾಗಿದೆ. ನಾವು ಶಾಂತಿ ಪ್ರಿಯ ಜನರಾಗಿದ್ದೇವೆ ಎಂದು ಮಸೀದಿಯು ನೆರೆಹೊರೆಯವರ ಹಕ್ಕುಗಳನ್ನು ಪಾಲಿಸಲು ನೆರವಾಗುವುದು ಎಂದು.

ಮಸೀದಿಯ ಜಾಗದ ಒಟ್ಟು ವಿಸ್ತೀರ್ಣ 2680 ಚ.ಮೀ ಆಗಿದೆ. ಇದು 22 ಮಾರ್ಚ್ 2012 ರಂದು ಖರೀದಿಸಲಾಯಿತು. ಇದರ ಖರೀದಿಯಲ್ಲಿ ಸ್ಥಳೀಯರು ತುಂಬ ಸಹಾಯ ನೀಡಿದ್ದಾರೆ. ಈ ಮಸೀದಿಯ ಅಡಿಗಲ್ಲು 5 ಜೂನ್ 2012 ರಂದು ಹುಝೂರ್ ತಮ್ಮ ಪವಿತ್ರ ಹಸ್ತದಿಂದ ಹಾಕಿದ್ದರು. ನಿರ್ಮಾಣಗೊಂಡ ಮಸೀದಿಯಲ್ಲಿ 76.30 ಚ.ಮೀ ವಿಸ್ತೀರ್ಣದಲ್ಲಿ ಎರಡು ಪ್ರತ್ಯೇಕ ಪ್ರಾಂಗಣಗಳು ಇವೆ. ಒಂದು ಪುರುಷರಿಗಾಗಿ ಇನ್ನೊಂದು

ಮಹಿಳೆಯರಿಗಾಗಿ.

ಮೀನಾರ್ (ಗೋಪುರ) ನ ಎತ್ತರ 14 ಮೀಟರ್ ಇದೆ. ಮಸೀದಿಯ ಗುಂಬಜ್‌ನ ಗೋಳವು 6 ಮೀಟರ್ ಇದೆ.

ಅಮಿರ್ ಸಾಹಿಬ್ ಜರ್ಮನಿಯರ ಪರಿಚಯ ಭಾಷಣ ನಂತರ Aachen ನಗರದ ಲಾರ್ಡ್ ಮೇಯರ್ Marcel Phillip ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು.

ಪ್ರಪ್ರಥಮವಾಗಿ ಗೌರವಾನ್ವಿತ ಖಲೀಫತುಲ್ ಮಸೀಹ್ ಅವರಿಗೆ ಹಾರ್ದಿಕವಾಗಿ ಸ್ವಾಗತ ಕೋರುತ್ತೇನೆ ಮತ್ತು ಇಂದಿನ ಸಭೆಯಲ್ಲಿ ಭಾಗವಹಿಸಿದ ಎಲ್ಲ ಉಪಸ್ಥಿತರಿಗೆ ಅಸ್ಸಲಾಮ್ ಅಲೈಕುಂ ಹೇಳುತ್ತೇನೆ.

ಮೇಯರ್ ಹೇಳಿದರು. ಇಂದಿನ ದಿನ Aachen ನಗರದವರಿಗೆ ಸಂತಸದ ದಿನವಾಗಿದೆ. ಏಕೆಂದರೆ ಅಲ್ಲಾಹನ ಒಂದು ಹೊಸ ಮನೆಯನ್ನು ನಿರ್ಮಿಸಲಾಗಿದೆ. ಇಂದು ಅದರ ಉದ್ಘಾಟನೆಯಾಗುತ್ತಿದೆ. ಇನ್ನೊಂದು ಸಂತೋಷದ ಮತ್ತು ಗೌರವದ ವಿಷಯವೆಂದರೆ ಈ ಮಸೀದಿ ನಿರ್ಮಾಣ ಸಮಯದಲ್ಲಿ ಇಲ್ಲಿನ ನಾಗರೀಕರು ಯಾವುದೇ ರೀತಿಯಲ್ಲಿ ತಡೆ ಒಡ್ಡಲಿಲ್ಲ. ಬದಲು ಒಂದು ಒಗ್ಗಟ್ಟಿನ ಭಾವ ಕಾಣಲು ಸಾಧ್ಯವಾಗಿದೆ.

ಅವರು ಹೇಳಿದರು. ಕಟ್ಟಡ ನಿರ್ಮಿಸ ಬಯಸುವ ಕಾರಣ ಇದು ನಿಮ್ಮ ಜನ್ಮಭೂಮಿ ಆದಂತೆಯೇ ಸರಿ. ನೀವು ಖಾಯಂ ಆಗಿ ಇಲ್ಲಿ ವಾಸಿಸಬಯಸುತ್ತೀರಿ ಎಂದು ಭಾವಿಸಬೇಕಾಗುತ್ತದೆ. ನೀವು ಇಂದು ಹಲವು ಜನರನ್ನು ಆಹ್ವಾನಿಸಿದ್ದೀರಿ. ಇದರ ಅರ್ಥ ನೀವು ಪ್ರತ್ಯೇಕವಾಗಿ ಇರಬಯಸುವುದಿಲ್ಲ. ಬದಲು ಎಲ್ಲರೊಂದಿಗೆ ಸೇರಿ ಇರಬಯಸುತ್ತೀರಿ. ಮತ್ತು ಈ ಪರಿಸರದಲ್ಲಿ ಹಾಗೂ ಸಮಾಜದ ಒಂದು ಅಂಗವಾಗ ಬಯಸುತ್ತೀರಿ ಎಂದು ತಿಳಿದುಬರುತ್ತದೆ.

ಅವರು ಹೇಳಿದರು. ಕೆಲವರು ನಗರದ ಶಾಂತಿಯನ್ನು ಭಂಗ ಮಾಡಬಯಸುತ್ತಾರೆ. ಆತಂಕ ಸೃಷ್ಟಿ ಮಾಡಬಯಸುತ್ತಾರೆ. ಅದಲ್ಲದೆ ಉಗ್ರವಾದಕ್ಕೆ ಪುಷ್ಟಿ ನೀಡುತ್ತಾರೆ. ಆದರೆ ನಾವೆಲ್ಲ ಒಟ್ಟುಗೂಡಿ ಇಂತಹ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ. ಮತ್ತು ಶಾಂತಿಯನ್ನು ಭಂಗವಾಗದಂತೆ ನೋಡಿಕೊಳ್ಳಬೇಕಾಗಿದೆ. ಈ ಮಸೀದಿಯ ಉದ್ಘಾಟನೆ ಸ್ಪಷ್ಟಪಡಿಸುವುದೇನೆಂದರೆ ಹಿಂಸಾವಾದಿಗಳು ಬಹುಸಂಖ್ಯಾತರಲ್ಲಿಲ್ಲ ಎಂದು.

ಅಂತಿಮವಾಗಿ ಮೇಯರ್ ಸಾಹಿಬ್ ತಮ್ಮ ಶುಭಾಕಾಂಕ್ಷೆಗಳನ್ನು ತಿಳಿಸಿದರು. ಈ ಮಸೀದಿ ಸದಾ ಪ್ರೀತಿ ಸೌಹಾರ್ದತೆಯಿಂದ ಇರುವ ಜಾಗವಾಗಿರಲಿ. ಅಲ್ಲಾಹನ ಅನುಗ್ರಹ ಮತ್ತು ಶಾಂತಿ ನಮ್ಮೆಲ್ಲರೊಂದಿಗಿರಲಿ ಎಂದು ಹಾರೈಸಿದರು.

ಅನಂತರ Dr. Stephanie Waletzki ಅವರು Integratioin misnitry ಯವರಾಗಿದ್ದು ಅವರು Nordrhen Westfalen ರಾಜ್ಯದ Labour and Anti corporation ರವರ ಸಂದೇಶ ಓದಿ ಹೇಳಿದರು.

ಅವರು ಹೇಳಿದರು. ಮಸ್ಜಿದ್ ಮನ್ಸೂರ್ ಉದ್ಘಾಟನೆಯ ಈ ಶುಭ ಸಂದರ್ಭದಲ್ಲಿ ಎಲ್ಲ ಅಹ್ಮದಿಯರಿಗೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. ಮತ್ತು ಸಲಾಂ ಪ್ರಸ್ತುತಪಡಿಸುತ್ತೇನೆ. ಖಲೀಫತುಲ್ ಮಸೀಹ್‌ರವರ ಶುಭಾಗಮನ ನಮಗೆ ಈ ನಗರಕ್ಕೆ ಗೌರವದ ವಿಷಯವಾಗಿದೆ. ಖಲಿಫತುಲ್ ಮಸೀಹ್ ಅವರ ಆಗಮನದಿಂದಾಗಿ Aachen ನಗರದ ಪ್ರಾಮುಖ್ಯತೆ ತಿಳಿಯುವಂತಾಗಿದೆ. ನಾನು ಎಲ್ಲಾ ಅತಿಥಿಯರಿಗೂ ಸುಸ್ವಾಗತ ಕೋರುತ್ತೇನೆ.

ಒಂದು ಅವಧಿ ಹಿಂದೆ ಕೋಲೋನ್ ಮಸೀದಿಯ ಉದ್ಘಾಟನೆ ಆಗಿತ್ತು. ಅನಂತರ ಜಮಾಅತ್ ನಮ್ಮ ಈ ರಾಜ್ಯದಲ್ಲಿ ಹಲವು ಮಸೀದಿಗಳನ್ನು ನಿರ್ಮಿಸಿದೆ. ಜಮಾಅತ್ ಇಲ್ಲಿ ತುಂಬ ಪ್ರಗತಿ ಸಾಧಿಸಿದೆ. ಅಹ್ಮದಿಯರು ಇಲ್ಲಿ ತುಂಬ ಸಕ್ರಿಯರಾಗಿದ್ದಾರೆ. ವಿವಿಧ ಕಾರ್ಯಕ್ರಮಗಳು ನಿಯೋಜಿಸುತ್ತಾರೆ. ನೀವು ನಿಮ್ಮ ಕಾರ್ಯಕ್ರಮಗಳ ಮೂಲಕ ಕ್ಷೇತ್ರದ ಸೇವೆ ಇತರರಿಗೆ ತೋರಿಸ ಬಯಸುತ್ತೀರಿ. ನೀವು ಪರಸ್ಪರ ಸೌಹಾರ್ದತೆಯಿಂದ ಇರಬಯಸುತ್ತೀರಿ.

ಮತ್ತೆ ಅವರು ತಮ್ಮ ಸಂದೇಶದಲ್ಲಿ ಹೇಳಿದರು. ನಮಗೆ ಬೇರೆಯವರೊಂದಿಗೆ ಆದರ ಹಾಗೂ ಗೌರವದಿಂದ ವರ್ತಿಸಬೇಕಾಗಿದೆ. ಒಬ್ಬರು ಇನ್ನೊಬ್ಬರಿಂದ ಒಳ್ಳೆಯ ಮಾತುಗಳನ್ನು ಕಲಿಯಬೇಕಾಗಿದೆ.

ಬಹಳಷ್ಟು ಜನರು ಧಾರ್ಮಿಕ ಹಾಗೂ ನಾಸ್ತಿಕರ ಮಧ್ಯೆ ಕಂದಕ ನಿರ್ಮಿಸಬಯಸುತ್ತಾರೆ. ಅವರ ಮಧ್ಯೆ ಗೊಂದಲ ಎಬ್ಬಿಸಬಯಸುತ್ತಾರೆ. ಅದರ ವಿರುದ್ಧ ನಾವು ಏಕತ್ರಗೊಂಡು ಶ್ರಮಪಡಬೇಕಾಗಿದೆ. ಅಹ್ಮದಿಯ ಜಮಾಅತ್ ಈ ವಿಷಯದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದೆ.

ಅಹ್ಮದಿಯಾ ಜಮಾಅತಿನ ಘೋಷ ವಾಕ್ಯ "ಎಲ್ಲರೊಂದಿಗೆ ಪ್ರೀತಿ, ದ್ವೇಷವಿಲ್ಲ ಯಾರೊಂದಿಗೂ" (Love for All, Hatred for none) ಶಾಂತಿ ಸ್ಥಾಪನೆಯ ಮೂಲ ಮಂತ್ರವಾಗಿದೆ. ಆ ಮೂಲಕ ಜಮಾಅತ್ ಅಹ್ಮದಿಯಾ ಪ್ರೀತಿ ಸೌಹಾರ್ದತೆ ಉಂಟು ಮಾಡ ಬಯಸುತ್ತದೆ ಹಾಗೂ ಉಗ್ರವಾದವನ್ನು ತಡೆಯ ಬಯಸುತ್ತದೆ.

ಅವರು ಕೊನೆಯಲ್ಲಿ ಹೇಳಿದರು. ಅಹ್ಮದಿಯರು ತುಂಬ ಸ್ಪಷ್ಟ ರೂಪದಲ್ಲಿ ಐಕ್ಯಮತ್ಯ ಹೊಂದಿದವರಾಗಿದ್ದಾರೆ. ನಮ್ಮ ಸಮಾಜದ ಒಂದು ಭಾಗವಾಗಿದ್ದಾರೆ. ನೀವೆಲ್ಲರೂ ತಮ್ಮ ಧರ್ಮ ಹಾಗೂ ಸಂಸ್ಕೃತಿಯೊಂದಿಗೆ ಜರ್ಮನಿ ಮತ್ತು Westfalen ರಾಜ್ಯದ ಭಾಗವಾಗಿದ್ದೀರಿ.

ಅನಂತರ Nordrhein Westfalen ರಾಜ್ಯದ ಸಂಸತ್ ಸದಸ್ಯರು Schultheis ತಮ್ಮ ಪರಿಚಯ ಭಾಷಣದಲ್ಲಿ ಹೇಳಿದರು. ಗೌರಾವಾನ್ವಿತ ಖಲೀಫತುಲ್ ಮಸೀಹ್ ಅವರಿಗೆ ಶುಭಾಗಮನವನ್ನು ಕೋರುತ್ತೇನೆ. ಹುಝೂರ್ ಆಗಮನವು ನಮಗೆ ಗೌರವದ ವಿಷಯವಾಗಿದೆ.

ಅವರು ಓರ್ವ ಅಹ್ಮದಿ ಮಿತ್ರ ತಾರಿಖ್ ಅರ್ಷದ್ ಸಾಹಿಬ್ ಸ್ಮರಣೆ ಮಾಡುತ್ತ ಹೇಳಿದರು. Town Hall ಮುಂದೆ ಅವರ ಹೂವಿನ ಅಂಗಡಿ ಇದೆ. ತಾರಿಖ್ ಸಾಹಿಬ್ ಸದಾ ಒಳ್ಳೆಯ ನೀತಿವಂತರು ಹಾಗೂ ಸಹಾಯಕರಾಗಿ ಎಲ್ಲಾ ನಾಗರಿಕರೊಂದಿಗೆ ಮತ್ತು ಸಂಸತ್ ಸದಸ್ಯರೊಂದಿಗೆ ಸದ್ವರ್ತನೆಯಿಂದ ವ್ಯವಹರಿಸುತ್ತಾರೆ ಮತ್ತು ಹೆಚ್ಚಾಗಿ ಅಹ್ಮದಿಯತ್ತಿನ ಪ್ರಚಾರ ಮಾಡುತ್ತಾರೆ ಮತ್ತು ಸಂಪರ್ಕ ಬೆಳೆಸುತ್ತಾರೆ.

ಅವರು ಹೇಳಿದರು. ಯಾರು ಕಟ್ಟಡ ನಿರ್ಮಿಸ ಬಯಸುವರೋ ಅವರು ಅಲ್ಲಿ ವಾಸಿಸಲು ಬಯಸುತ್ತಾರೆ. ಅಲ್ಲಾಹನ ಮನೆ ನಿರ್ಮಿಸ ಬಯಸುವವರಂತೂ ನಿಶ್ಚಿತವಾಗಿಯೂ ಇರಬಯಸುತ್ತಾರೆ ಆದುದರಿಂದ ಇಂದಿನ ದಿನ ತುಂಬ ತುಂಬ ಸಂತೋಷದ ದಿನವಾಗಿದೆ. ಬೆರೆತು ಆಚರಿಸಲಾಗುತ್ತಿದೆ. ಇದು ಧಾರ್ಮಿಕ ಸ್ವಾತಂತ್ರ್ಯ ಇಲ್ಲದೆ ಸಾಧ್ಯವಾಗುತ್ತಿರಲಿಲ್ಲ. ಪ್ರತಿಯೊಬ್ಬ ಮನುಷ್ಯನ ಇದು ಮೂಲಭೂತ ಹಕ್ಕಾಗಿದೆ. ತಾನು ಬಯಸಿದ ಧರ್ಮವನ್ನು ಸ್ವೀಕರಿಸಬಹುದು ಹಾಗೂ ಅದರಂತೆ ನಡೆಯಬಹುದು. ಅವರು ಹೇಳಿದರು. ಮಸ್ಜಿದ್ ಮನ್ಸೂರ್ ನಿರ್ಮಾಣದಿಂದಾಗಿ ಸಹಜವಾಗಿ ಅವರ ಹಕ್ಕಿನಂತೆ ಗೌರವಕ್ಕೆ ಅರ್ಹರಾಗಿದ್ದಾರೆ.

ಅವರು ಹೇಳಿದರು. ಯಾವ ರೀತಿ ನಾವು ತಮ್ಮ ಧರ್ಮವನ್ನು ಗೌರವಿಸುತ್ತೇವೆಯೋ ಅದೇ ರೀತಿ ಇತರರ ಧರ್ಮವನ್ನೂ ಗೌರವಿಸಬೇಕಾಗಿದೆ. ಆಗ ಮಾತ್ರ ನಾವು ಪರಸ್ಪರ ಪ್ರೀತಿಯಿಂದ ಇರಲು ಸಾಧ್ಯವಾದೀತು.

ಅವರು ಕೊನೆಯಲ್ಲಿ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತ ಹೇಳಿದರು. ನಮಗೆ ಈ ಮಸೀದಿಯ ನಿರ್ಮಾಣದಿಂದ Aachen ದಲ್ಲಿ ಒಂದು ಒಳ್ಳೆಯ ನೆರೆಯವರು ಸಿಕ್ಕಿದಂತಾಗಿದೆ. ಅಲ್ಲಾಹನು ನಮಗೆಲ್ಲರಿಗಾಗಿ ಶುಭಕರವನ್ನಾಗಿ ಮಾಡಲಿ.

ಇಂದು ಮಸ್ಜಿದ್ ಮನ್ಸೂರ್ Aachen ಉದ್ಘಾಟನಾ ಸಂದರ್ಭ ಯೂರೋಪಿಯನ್ ಪಾರ್ಲಿಮೆಂಟಿನ ಅಧ್ಯಕ್ಷರು Schulz ಅವರು ತಮ್ಮ ಸಂದೇಶವನ್ನು ಕಳುಹಿಸಿದ್ದಾರೆ.

ಮುಕರ್ರಮ್ ಅಮೀರ್ ಸಾಹಿಬ್ ಜಮಾಅತ್ ಅಹ್ಮದಿಯಾ ಜರ್ಮನಿ ಅವರು ಈ ಕೆಳಗಿನ ಸಂದೇಶವನ್ನು ಓದಿ ತಿಳಿಸಿದರು.

"ಗೌರವಾನ್ವಿತ ಖಲೀಫತುಲ್ ಮಸೀಹ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್, ಲಾರ್ಡ್ ಮಾಅರ್, ಸಭಿಕರೇ!

ಅಹ್ಮದಿಯಾ ಮುಸ್ಲಿಮ್ ಜಮಾಅತಿನ "ಮಸ್ಜಿದ್ ಮನ್ಸೂರ್" ಉದ್ಘಾಟನಾ ಸಮಾರಂಭದ ಈ ಸಂದರ್ಭದಲ್ಲಿ ನನಗೆ ಹೇಳುವ ಅವಕಾಶ ದೊರೆತದ್ದಕ್ಕೆ ತುಂಬ ಸಂತೋಷವಾಗುತ್ತಿದೆ. ತಮ್ಮ ಕರ್ತವ್ಯ ಕಾರ್ಯಗಳ ಬಾಹುಳ್ಯದಿಂದಾಗಿ ನನಗೆ ಬರಲು ಸಾಧ್ಯವಾಗಲಿಲ್ಲ. ಮಸ್ಜಿದ್ ಮನ್ಸೂರ್ ಉದ್ಘಾಟನೆ ಮತ್ತು ಜಾಗತಿಕ ಅಹ್ಮದಿಯಾ ಜಮಾಅತಿನ ಧಾರ್ಮಿಕ ನೇತಾರರ ಆಗಮನವು ಯೂರೋಪಿನ ಹೃದಯ ವೈಶಾಲ್ಯದ ಮಾರ್ಗದ ಕೊರತೆಯನ್ನು ತುಂಬಲು ಒಂದು ಅತ್ಯಂತ ಪರಿಣಾಮಕಾರಿ ಹೆಜ್ಜೆ ಆಗಿದೆ. ವಾಕ್ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಯೂರೋಪಿನ ರಾಜಕೀಯ ಮೌಲ್ಯವಾಗಿದೆ. ಮತ್ತು ಈ ಮೌಲ್ಯ ಮಸ್ಜಿದ್ ಮನ್ಸೂರ್ Aachen ನಗರದ ಧಾರ್ಮಿಕ ಸಂಸ್ಥೆಗಳ ಸೇರ್ಪಡೆಯಿಂದಾಗಿ ಇನ್ನೂ ಹೆಚ್ಚು ಬಲ ಬಂದಂತಾಗಿದೆ.

Aachen ನಗರ ಮೂರು ದೇಶಗಳ ಗಡಿಗಳಿಂದ ಕೂಡಿರುವ ಒಂದು ಯೂರೋಪಿನ ನಗರವಾಗಿದೆ. ಇಲ್ಲಿ ವಿವಿಧ ಭೌಗೋಳಿಕ ಗಡಿಗಳು ಮತ್ತು ಧಾರ್ಮಿಕ ಭಿನ್ನತೆಯಿದ್ದರೂ ಐಕ್ಯಭಾವನೆ ಹೊಂದಿ ಜೀವನ ನಡೆಸುತ್ತಿದ್ದಾರೆ. ಯೂರೋಪಿನ ದೇಶಗಳಲ್ಲಿ ಈ ತರಹದ ಭಾವನೆ ಎಲ್ಲ ಕಡೆ ಇಲ್ಲ. ಕೆಲ ನಕಾರಾತ್ಮಕ ಧೋರಣೆಗಳಿಂದಾಗಿ, ಸಾಮುದಾಯಿಕ ಗರ್ವದಿಂದ ಒಬ್ಬರು ಇನ್ನೊಬ್ಬರ ನಡುವೆ ಭಯ ಹುಟ್ಟಿಸುತ್ತಿದ್ದಾರೆ ಮತ್ತು ಸಮಾಜದಲ್ಲಿ ಅಸ್ಥಿರತೆ ಉಂಟು ಮಾಡುವ ಪ್ರಯತ್ನದಲ್ಲಿದ್ದಾರೆ. ಅದಾಗ್ಯೂ ನಾವು ಸಮಾನತೆ ಮತ್ತು ಪರಸ್ಪರ ಗೌರವಾಧಾರಿತ ಸಮುದಾಯದವರಾಗಿದ್ದಾರೆ.

ಮಸ್ಜಿದ್ ಮನ್ಸೂರ್ ಉದ್ಘಾಟನೆ ಮತ್ತು ಅದಕ್ಕೆ ಸಂಬಂಧಿಸಿದ ಸಾಮಾಜಿಕ ಹಾಗೂ ನೈತಿಕ ಹೊಣೆಗಾರಿಕೆ Aachen ನಗರದ ಹೃದಯ

ವೈಶಾಲ್ಯವನ್ನು ಸ್ಪಷ್ಟಪಡಿಸುತ್ತದೆ. ನಾನು ಅಹ್ಮದಿಯಾ ಜಮಾಅತಿನ ಸದಸ್ಯರಿಗೆ ಜಮಾಅತ್ತಿನ ಒಳ್ಳೆಯ ಭವಿಷ್ಯಕ್ಕಾಗಿ ಶುಭಾಕಾಂಕ್ಷೆಗಳನ್ನು ವ್ಯಕ್ತಪಡಿಸುತ್ತೇನೆ. ಮತ್ತು ಎಲ್ಲಾ ಬಾಂಧವರಿಗೆ ಶುಭಾಶಯಗಳನ್ನು ಹೇಳುತ್ತೇನೆ.

ಅನಂತರ 8 ಗಂಟೆಗೆ ಹುಝೂರ್ ಮಾತನಾಡಿದರು.

ಹುಝೂರ್ ಅನ್ವರ್(ಅಬಿಅ) "ಮಸ್ಜಿದ್ ಮನ್ಸೂರ್" ಉದ್ಘಾಟನೆ" Aachen ಜರ್ಮನಿಯ ಸಂದರ್ಭದ ಸಂಬೋಧನೆ.

ಹುಝೂರ್ ತಊರ್ಝ್ ತಸ್ಮಿಯಾ ಮತ್ತು ತಶ್‌ಹುದ್ ನಂತರ ಹೇಳಿದರು ಎಲ್ಲ ಆದರಣೀಯ ಅತಿಥಿಗಳಿಗೆ ಮೊದಲು ನಾನು ಅಸ್ಸಲಾಮು ಅಲೈಕುಮ್ ರಹ್ಮತುಲ್ಲಾಹಿ ವ ಬರಕಾತುಹ್" ಪ್ರಸ್ತುತಪಡಿಸುತ್ತೇನೆ. ಅಲ್ಲಾಹನು ಎಲ್ಲರಿಗೂ ಶಾಂತಿ ಮತ್ತು ಅನುಗ್ರಹ ದಯಪಾಲಿಸಲಿ, ಇದೇ ನಮ್ಮ ಸಂದೇಶವಾಗಿದೆ.

ಹುಝೂರ್ ಹೇಳಿದರು. ನನಗೆ ತಿಳಿಸಲಾಗಿದೆ. ಇಲ್ಲಿ ಅತಿಥಿಗಳಿಗೆ ಬರಲು 6 ಗಂಟೆಯ ಸಮಯ ನೀಡಲಾಗಿತ್ತು. ನನಗೆ ಇಲ್ಲಿ ಬರಲು ತುಂಬ ತಡವಾಗಿದೆ, ಸುಮಾರು ಒಂದು ಗಂಟೆಗಿಂತ ಹೆಚ್ಚು ಸಮಯ ನೀವು ಕಾದಿದಂತಾಯಿತು. ಅದಕ್ಕಾಗಿ ನಾನು ಕ್ಷಮೆಯಾಚಿಸುತ್ತೇನೆ. ಆಯೋಜಕರಿಗೆ ನನ್ನ ಬರುವಿಕೆಯ ಸಮಯ ಅಂದಾಜಿಸಬಹುದಾಗಿತ್ತು. ನಾನು ಇಂದು ಮುಂಜಾನೆ ಲಂಡನ್ನಿನಿಂದ ಹೊರಟಿದ್ದೇನೆ. By Road ಬಂದಿರುತ್ತೇನೆ. ರೈಲಿನ ಮೂಲಕ ಮತ್ತೆ ಮುಂದೆ ರಸ್ತೆಯಲ್ಲಿ Traffic ಹಾಗೂ ದೀರ್ಘ ಪ್ರಯಾಣದಿಂದಾಗಿ ಸಮಯಕ್ಕೆ ಸರಿಯಾಗಿ ಹಾಜರಾಗಲು ಸಾಧ್ಯವಾಗಲಿಲ್ಲ. ಆದುದರಿಂದ ಮೊದಲು ಈ ತಡವಾದ ಕಾರಣ ಕ್ಷಮೆಯಿರಲಿ.

ಹುಝೂರ್ ಹೇಳಿದರು. ಈಗ ನಾನು ಮಸೀದಿಯ ಉದ್ಘಾಟನಾ ವಿಷಯದ ಕಡೆ ಬರುತ್ತೇನೆ ನಿಮ್ಮ ಮುಂದೆ ಇಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಪಠಿಸಲಾಯಿತು. ಅದರಲ್ಲಿ ದುಂದುವೆಚ್ಚ ಮಾಡದಿರಲು ತಿಳಿಸಲಾಗಿದೆ. ಊಟೋಪಚಾರ ಮಾಡಿರಿ ಆದರೆ ದುಂದುವೆಚ್ಚ ಮಾಡದಿರಿ. ನ್ಯಾಯ ಮತ್ತು ಸಮಾನತೆಯಿಂದ ವರ್ತಿಸಿರಿ. ಇಂತಹ ಶಿಕ್ಷಣ ಮಸೀದಿಯೊಂದಿಗೆ ಅಲ್ಲಾಹನು ಜೋಡಿಸಿದ್ದಾನೆ. ಇದರ ಸಂಬಂಧ ಮಸೀದಿಯೊಂದಿಗೆ ಜೋಡಿಸಲಾಗಿದೆ. ಅಲ್ಲಾಹನು ಮನುಷ್ಯನಿಗೆ ಕೇವಲ ಊಟೋಪಚಾರಕ್ಕಾಗಿ ಸೇವನೆಗಾಗಿ ಜನ್ಮ ನೀಡಲಿಲ್ಲ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿದನು. ಪ್ರಾಣಿಗಳು ಊಟ ಮಾಡುತ್ತವೆ. ಪಾನಿಯಗಳನ್ನು ಸೇವಿಸುತ್ತಾರೆ. ಆದರೆ ಪ್ರಾಣಿಗಳ ಊಟ ಮಾಡುವುದಿಲ್ಲ. ಮತ್ತು ಮನುಷ್ಯರ ನಡುವೆ ವ್ಯತ್ಯಾಸವಿರಬೇಕಾಗಿದೆ. ವಾಸ್ತವವೇನಾಗಿದೆ ಎಂದರೆ ಅಲ್ಲಾಹನು ಮನುಷ್ಯನಿಗೆ ಭೌತಿಕ ಪ್ರಯೋಜನ ಪಡೆಯಲು ಅಹಾರ ಸೇವನೆಯನ್ನು ಒದಗಿಸಿದ್ದಾನೆ. ಅದರಿಂದ ಪ್ರಯೋಜನ ಪಡೆಯಬಹುದು. ಅವನು ನೀಡಿದ ಸವಲತ್ತುಗಳಿಂದ ಪ್ರಯೋಜನ ಪಡೆಯಬಹುದು. ಆದರೆ ಪ್ರತಿಯೊಂದರಲ್ಲಿ ಒಂದು ಮಿತಿಯಿರಬೇಕಾಗಿದೆ. ಒಂದು Balance ಇರಬೇಕಾಗಿದೆ. ಇದು ಒಬ್ಬ ನಿಜವಾದ ಮನುಷ್ಯನ ಕಾರ್ಯವಾಗಿದೆ. ಈ ಗುಣಗಳು ಇದ್ದರೆ ಅಲ್ಲಾಹನು ಹೇಳಿದನು. ಆಗ ಆರಾಧನೆ ಕಡೆಯೂ ನಿಮ್ಮ ಗಮನ ಬರುವುದು ಮತ್ತು ಮಸೀದಿಗಳ ಕಡೆಗೆ ಗಮನವಿರುವುದು. ಆದುದರಿಂದ ಅಲ್ಲಾಹನು ಈ ಸುಂದರವಾದ ಶಿಕ್ಷಣ ನಮಗೆ ನೀಡಿರುವನು. ಭೌತಿಕ ವಸ್ತುಗಳಿಂದ ನಿಸ್ಸಂದೇಹವಾಗಿ ನೀವು ಪ್ರಯೋಜನ ಪಡೆಯಿರಿ. ಆದರೆ ನಿಮ್ಮ ಒಂದು ಗುರಿಯಿದೆ. ಏಕದೇವನನ್ನು ಆರಾಧಿಸಬೇಕಾಗಿದೆ. ಮತ್ತು ಅವನ ದಾಸರ ಹಕ್ಕುಗಳನ್ನು ನೀಡಬೇಕಾಗಿದೆ ಎಂಬುದು ಮರೆಯಬಾರದು. ಆದುದರಿಂದ ಅಗತ್ಯಕ್ಕಿಂತ ಹೆಚ್ಚು ತಮ್ಮ ಮೇಲೆ ಖರ್ಚು ಮಾಡಿಕೊಳ್ಳಬಾರದು. ದುಂದುವೆಚ್ಚವು ಮನುಷ್ಯನನ್ನು ಆರಾಧನೆಯಿಂದ ವಂಚಿಸುತ್ತದೆ ಮತ್ತು ಅವನ ದಾಸನ ಹಕ್ಕುಗಳನ್ನು ನೀಡುವಲ್ಲಿಯೂ ಆಡಚಣೆ ಉಂಟುಮಾಡುತ್ತದೆ.

ಹುಝೂರ್ ಹೇಳಿದರು. ಲೋಕದಲ್ಲಿ ಅಸಂಖ್ಯಾತ ಬಡ ಜನರಿದ್ದಾರೆ. ಅಸಂಖ್ಯಾತ ಬಡ ಸಮುದಾಯಗಳಿವೆ. ಅಸಂಖ್ಯಾತ ಜನ ರೋಗಿಗಳಿದ್ದಾರೆ. ಹಲವು ಜನರು ಅಗತ್ಯಯುಳ್ಳವವರಾಗಿದ್ದಾರೆ. ಹಲವು ಜನರು ವಿದ್ಯೆ ಪಡೆಯ ಬಯಸುತ್ತಾರೆ. ಆದರೆ ವಿದ್ಯೆ ಪಡೆಯುವ ಯೋಚನೆ ಇದ್ದರೆ ದುಂದುವೆಚ್ಚ ಮಾಡುವುದಿಲ್ಲ. ಅಲ್ಲಾಹನು ತನಗೆ ನೀಡಿದ ಅನುಗ್ರಹದಲ್ಲಿ ಉಳಿತಾಯ ಮಾಡಿ ತನ್ನ ಹಕ್ಕುಗಳನ್ನು ಪೂರೈಸಿಕೊಳ್ಳಬೇಕಾಗಿದೆ. ಮೊದಲನೆಯದು ತನ್ನ ಹಕ್ಕಾಗಿದೆ, ನಂತರ ತನ್ನ ಹೆಂಡತಿ ಮಕ್ಕಳ ಹಕ್ಕಾಗಿದೆ, ಅಲ್ಲಿ ಮಾನವೀಯತೆಯ ಹಕ್ಕೂ ಪಾಲಿಸಬೇಕಾಗಿದೆ. ಅಲ್ಲಾಹನು ಹೇಳುತ್ತಾನೆ. ನೀವು ನನ್ನನ್ನು ಸ್ಮರಿಸಿದರೆ ತಿಳಿಯಬಹುದು ದೇವನೊಬ್ಬನಿದ್ದಾನೆ, ಅವನು ಲೋಕವನ್ನು ಸೃಷ್ಟಿಸಿದ್ದಾನೆ. ಆಗ ಅವನಿಗೆ ನಾವು ಕೃತಜ್ಞರಾಗುವೆವು. ಈ ಕೃತಜ್ಞತಾ ಭಾವವೇ ಆರಾಧನೆಯಾಗಿದೆ. ಅಲ್ಲಾಹನು ಹೇಳಿದನು. ಈ ಕೃತಜ್ಞತೆಯ ಪ್ರಕಟಣೆ ನನ್ನ ದಾಸರ ಸೇವೆಯ ಮೂಲಕ ಆಗಬೇಕಾಗಿದೆ. ಇದೊಂದು ಮೂಲ ಕಾರಣವಾಗಿದೆ. ಅದನ್ನು ಅಲ್ಲಾಹನು ಮಸೀದಿಯೊಂದಿಗೆ ಜೋಡಿಸಿ ಹೇಳಿರುತ್ತಾನೆ. ಈ ಕಾರಣ ನೋಡಿ! ಎಷ್ಟು ಸುಂದರ ಶಿಕ್ಷಣವಾಗಿದೆ. ಅದು ನಮಗೆ ಮಸೀದಿಯೊಂದಿಗೆ ಜೋಡಿಸಿದೆ ಮತ್ತು ಇಡೀ ಮಾನವ ಕುಲದ ಹಕ್ಕುಗಳನ್ನು ಪಾಲಿಸಲಿಕ್ಕೆ ನಮ್ಮ ಗಮನ ಸೆಳೆದಿದೆ.

ಹುಝೂರ್ ಹೇಳಿದರು. ಅಮೀರ್ ಸಾಹಿಬ್ ತಿಳಿಸಿರುವರು. ಇಲ್ಲಿ ಬಹಳಷ್ಟು ರಾಜರು ಬಂದಿದ್ದರು. Aachen ನ ಇತಿಹಾಸವು ಬಹು ಪುರಾತನವಾಗಿದೆ. ಲೌಕಿಕ ಅರಸುತನವು ಬರುವುದು ಮತ್ತು ಹೋಗುವುದು. ಹಲವು ರಾಜರು ಬಂದರು ಮತ್ತು ನೀವು ಕೇಳಿರಬಹುದು ನೆಪೋಲಿಯನ್ ಸಹ ಅದರಲ್ಲಿ ಒಬ್ಬನಾಗಿದ್ದನು. ಇವರೆಲ್ಲರೂ ಬಂದು ಅಗಲಿ ಹೋದರು. ಕೆಲವರು ಒಳ್ಳೆಯ ಕೆಲಸಗಳನ್ನು ಮಾಡಿದರು. ಅವರ ಅವಧಿಯನ್ನು ಕೆಲ ಜನರು ನೆನಪಿನಲ್ಲಿಟ್ಟರು. ಅದರ ಮೇಲೆ ಹೆಚ್ಚುಗಾರಿಕೆ ಏನೆಂದರೆ ಇತಿಹಾಸವು ಅವರನ್ನು ಸುರಕ್ಷಿತವಾಗಿಟ್ಟಿದೆ. ಅದೇ ರೀತಿ ಕೆಲವರು ಸರಿಯಾಗಿ ಕೆಲಸ ಮಾಡಲಿಲ್ಲ. ಅಂತಹ ರಾಜರು ನೀಡಿದ ಹಿಂಸೆಗಳೂ ಇವೆ. ಹೀಗೆ ರಾಜರು ಬರುತ್ತಾರೆ. ಅಗಲಿ ಹೋಗುತ್ತಾರೆ ಅವರ ಕುಟುಂಬಗಳು ನಾಮಾವಶೇಷವಾಗುತ್ತವೆ. ಒಂದು ಮಿತಿಯೊಳಗೆ ಅವರು ಕೆಲಸಗಳನ್ನು ಸಾದಿಸುತ್ತಾರೆ ಇತಿಹಾಸವನ್ನು ಪರಾಮರ್ಶಿಸುವವರು ಅದರಲ್ಲಿ ಕೆಲವನ್ನು ನೆನಪಿಡುತ್ತಾರೆ. ಆದರೆ ವಾಸ್ತವದಲ್ಲಿ ಸದಾ ನೆನಪಿಡಬೇಕಾದ ಬಾದಷಾಹ ಒಬ್ಬನಿದ್ದರೆ ಅವನು ಅಲ್ಲಾಹನಾಗಿದ್ದಾನೆ. ಈ ಲೋಕವನ್ನು ಸೃಷ್ಟಿಸಿದ ಅವನು ಅದರ ಪರಿಪಾಲಕನೂ ಆಗಿದ್ದಾನೆ. ಜನರನ್ನು ಪಾಲನೆ ಪೋಷಣೆ ಮಾಡುವವನಾಗಿದ್ದಾನೆ. ಅವನು ಹೇಳುತ್ತಾನೆ ನಾನು ಮಾಲೀಕನೂ ಹೌದು. ನಾನು ಈ ಲೋಕವನ್ನು ಸೃಷ್ಟಿಸಿದ್ದೇನೆ ಎಂದರೆ ಅದರ ಮಾಲಿಕತ್ವದ ಹಕ್ಕುಗಳು ನನ್ನ ಬಳಿಯಿದೆ. ಆದರೆ ನಾನು ದೌರ್ಜನ್ಯಗಾರನಲ್ಲ, ನಾನು ಮನುಷ್ಯನಿಗೆ ಪ್ರೀತಿ ಮತ್ತು ಪ್ರೇಮ ನೀಡುವೆನು. ಮತ್ತು ಹೇಳುವೆನು. ನಾನು ಆರಾಧ್ಯನಾಗಿದ್ದೇನೆ. ನನ್ನ ಆರಾಧನೆಯನ್ನು ಮಾಡಿರಿ.

ಆದುದರಿಂದ ಅಲ್ಲಾಹನು ಎಂತಹ ಬಾದಷಾಹ ನಾಗಿದ್ದಾನೆಂದರೆ ಅವನು ಆದಿಯಿಂದಲೂ ಇದ್ದಾನೆ ಮತ್ತು ಮುಂದೆಯೂ ಇರುವನು, ಅವನು ಪರಿಪಾಲಕನೂ ಆಗಿದ್ದಾನೆ. ಅವನು ಮಾಲಿಕನೂ ಆಗಿದ್ದಾನೆ. ಅವನು ಏಕನಾಗಿದ್ದಾನೆ, ಅವನನ್ನು ಮಾತ್ರ ಆರಾಧಿಸಬೇಕಾಗಿದೆ. ಆದುದರಿಂದ ಯಾವ ಲೌಕಿಕ ಬಾದಷಾಹನು, ಈ ಬಾದಷಾಹನನ್ನು ಎದುರಿಸಲು ಸಾಧ್ಯವಿಲ್ಲ. ಆದುದರಿಂದ ನಮಗೆ ಎಲ್ಲರಿಗಿಂತ ಆ ಬಾದಷಾಹನನ್ನು ನೆನಪಿಡುವ ಅಗತ್ಯವಿದೆ. ಅಹ್ಮದಿಯಾ ಜಮಾಅತ್ ಮಸೀದಿಗಳನ್ನು ನಿರ್ಮಿಸುತ್ತಿದೆಯಾದರೆ ಅದರ ಒಂದು ಉದ್ದೇಶ ಈ ಲೋಕದ ಸೃಷ್ಟಿಕರ್ತನನ್ನು ಸ್ಮರಿಸುವುದಾಗಿದೆ. ಲೋಕದ ಎಲ್ಲ ಧರ್ಮಗಳು ಇದೆ ವಿಷಯದ ಕಡೆಗೆ ಗಮನ ಸೆಳೆಯುತ್ತದೆ.

ಅಲ್ಲಾಹನು ನಾನು ಪರಿಪಾಲಕನಾಗಿದ್ದೇನೆ ಎಂದು ಹೇಳಿರುವಾಗ ಅವನ ಪೋಷಣೆಯು ನಿರೀಕ್ಷಿಸುವುದೇನೆಂದರೆ, ಎಲ್ಲಿ ನೀವು ನಿಮ್ಮ ಪೋಷಣೆ ಕಡೆಯ ಗಮನ ಹರಿಸುವಿರೋ ಅಲ್ಲಿ ಇನ್ನೊಬ್ಬರ ಬಗ್ಗೆಯೂ ನೀವು ಚಿಂತಿಸಬೇಕಾಗುತ್ತದೆ. ಏಕೆಂದರೆ ಪವಿತ್ರ ಖುರ್‌ಆನಿನ ಮೊದಲ ಅಧ್ಯಯದಲ್ಲಿಯೇ ಅಲ್ಲಾಹನು ತನ್ನನ್ನು ಸರ್ವಲೋಕಗಳ ಪರಿಪಾಲಕನೆಂದು ಹೇಳಿದ್ದಾನೆ. ಅಲ್ಲಾಹನು ಹೇಳಿದನು. ನಾನು ಮುಸಲ್ಮಾನರ ರಬ್ ಆಗಿದ್ದೇನೆ. ನಾನು ಕ್ರೈಸ್ತರ ರಬ್ ಆಗಿದ್ದೇನೆ. ನಾನು ಯಹೂದಿಯ ರಬ್ ಆಗಿದ್ದಾನೆ. ನಾನು ಹಿಂದುಗಳ ರಬ್ ಆಗಿದ್ದೇನೆ. ನಾನು ಎಲ್ಲ ಧಾರ್ಮಿಕ ಅನುಯಾಯಿಗಳ ರಬ್ ಆಗಿದ್ದೇನೆ ಅಲ್ಲದೆ ಯಾರು ನನ್ನನ್ನು ನಂಬುವುದಿಲ್ಲವೋ ಅವರ ಪಾಲನೆ ಪೋಷಣೆ ಸಹ ಮಾಡುತ್ತಿದ್ದೇನೆ. ಒಟ್ಟಾರೆ ಅವನು ಸರ್ವಲೋಕಗಳ ಪರಿಪಾಲಕನಾಗಿದ್ದಾನೆ. ಅದರ ಪರಿಣಾಮವಾಗಿ ಅಲ್ಲಾಹನು ನಮಗೆ ಹೇಳುವನು. ನೀವು ನನ್ನನ್ನು ಆರಾಧಿಸಿರಿ. ಆದುದರಿಂದ ಅಲ್ಲಾಹನ ಮನೆಯ ನಿರ್ಮಾಣದ ಉದ್ದೇಶವು ಅವನನ್ನು ಆರಾಧಿಸುವುದಾಗಿದೆ. ಯಾವುದೇ ಧರ್ಮದ ಧಾರ್ಮಿಕ ಸ್ಥಳವಾಗಲಿ ಉದಾಹರಣೆಗೆ Syaagogoues, ಅದರ ನಿರ್ಮಾಣ ಉದ್ದೇಶವು ಇದೇ ಆಗಿರುತ್ತದೆ.

ಮತ್ತೆ ಅಲ್ಲಾಹನು ಹೇಳಿದನು. ನಾನು ರಬ್ ಆದ ಕಾರಣದಿಂದಾಗಿ ನೀವು ಸಹ ನನ್ನ ಗುಣಗಳನ್ನು ಹೊಂದಿ ಇತರರಿಗೋಸ್ಕರ ಪ್ರಕಟಪಡಿಸುವವರಾಗಿರಿ. ನನ್ನ ಗುಣಗಳನ್ನು ಅಳವಡಿಸಿಕೊಂಡು ನನ್ನ ಇತರ ದಾಸಗಳ ಹಕ್ಕುಗಳನ್ನು ನೀಡುವವರಾಗಿರಿ, ನಾನು ಲೋಕವನ್ನು ಪರಿಪಾಲಿಸುತ್ತಿದ್ದೇನೆ. ನೀವು ಲೋಕ ಪೋಷಣೆ ಮಾಡಿರಿ, ನಾನು ಲೋಕಕ್ಕೆ ನೀಡುವವನಾಗಿದ್ದೇನೆ. ನೀವು ಸಹ ಅಗತ್ಯ ಉಳ್ಳವರಿಗೆ ನೀಡಿರಿ, ಬಡವರ ಸೇವೆ ಮಾಡಿರಿ. ಜನರೊಂದಿಗೆ ಪ್ರೀತಿಯ ವ್ಯವಹಾರ ಮಾಡಿರಿ. ಇದುವೇ ಇಸ್ಲಾಮಿನ ನೈಜ ಶಿಕ್ಷಣವಾಗಿದೆ. ಅದನ್ನು ಅಹ್ಮದಿಯಾ ಜಮಾಅತ್ ಅನುಸರಿಸುತ್ತದೆ ಮತ್ತು ಅದರಂತೆ ನಡೆದುಕೊಳ್ಳುತ್ತದೆ. ಅದನ್ನು ಲೋಕದಲ್ಲಿ ಪಸರಿಸ ಬಯಸುತ್ತದೆ.

**(ಮುಂದುವರಿಯುವುದು)**

**ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಸಹಯೋಗದಲ್ಲಿ ನಡೆಯುತ್ತಿರುವ ನೂರ್ ಆಸ್ಪತ್ರೆಯ ಎಕ್ಸ್‌ರೇ (XRay) ಹಾಗೂ ದಂತ (Dental) ವಿಭಾಗದಲ್ಲಿ ಮಹಿಳಾ ಟೆಕ್‌ನೀಶಿಯನ್ (Lady Technician) ನ ಎರಡು ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.**

ಅರ್ಜಿ ಸಲ್ಲಿಸುವ ಮಹಿಳೆಯರು ಕೆಳಗೆ ನಮೂದಿಸಿದ ಶರತ್ತುಗಳನ್ನು ಪೂರೈಸುವವರಾಗಿರಬೇಕು:–

**ಮಹಿಳಾ ಟೆಕ್‌ನಿಶಿಯನ್ (Lady Technician) ಹುದ್ದೆ ಎಕ್ಸರೇ X Ray ವಿಭಾಗ ನೂರ್ ಆಸ್ಪತ್ರೆ ಖಾದಿಯಾನ್‌ನ ಷರತ್ತುಗಳು:**

1) ಅಭ್ಯರ್ಥಿಯು ಅಧಿಕೃತ ಸಂಸ್ಥೆಯಿಂದ "Diploma in Radiology technology" ಮಾಡಿರಬೇಕು. ಹಾಗೂ Digital technology and Competency In ECG Technology ಅದರಲ್ಲಿ ಕನಿಷ್ಠ 3 ವರ್ಷಗಳ ಅನುಭವ ಪಡೆದಿರಬೇಕು.
2) ಅಭ್ಯರ್ಥಿಗೆ ಉತ್ತಮ Good Communication Skill ನಿರ್ಭಂದವಾಗಿದೆ.

**ದಂತ(Dental) ವಿಭಾಗದಲ್ಲಿ ಮಹಿಳಾ ಟೆಕ್ನಿಶಿಯನ್ (Lady Technician)ನ ಹುದ್ದೆಗಾಗಿ ನೂರ್ ಹಾಸ್ಪಿಟಲ್ ಖಾದಿಯನ್‌ನ ಷರತ್ತುಗಳು:**

1) ಅಭ್ಯರ್ಥಿ ರಿಜಿಸ್ಟರ್‌ಗೊಂಡ ಹಾಗೂ ಮಂಜೂರಿ ಪಡೆದ ಸಂಸ್ಥೆಯಿಂದ Diploma in Dentistry ಮಾಡಿರಬೇಕು. ಮತ್ತು ಅದರಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವ ಪಡೆದಿರಬೇಕು.
2) ಅಭ್ಯರ್ಥಿಯಲ್ಲಿ ಉತ್ತಮ 'Communication Skill' ನಿರ್ಬಂದವಾಗಿದೆ.

**ಎರಡು ಹುದ್ದೆಯ ಶರತ್ತುಗಳು:–**

1) ಅಭ್ಯರ್ಥಿಯ ವಯಸ್ಸು 22 ರಿಂದ 32 ವರ್ಷಗಳ ಒಳಗಿರಬೇಕು.
2) ಕೇಂದ್ರ ಆಯ್ಕೆ ಸಮಿತಿಯಿಂದ ಏರ್ಪಡಿಸಲಾದ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು.
3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದವರು ನೂರ್ ಹಾಸ್ಪಿಟಲ್ ಖಾದಿಯಾನ್ ಅವರಿಂದ Medical Fitness Certificate ಪ್ರಸ್ತುತ ಪಡಿಸಬೇಕಾಗುವುದು.
4) ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿ, ಖಾದಿಯಾನ್ ಆಗಮನ ನಿರ್ಗಮನದ ಖರ್ಚು ಮತ್ತು ಎಲ್ಲ ವೈದ್ಯಕೀಯ ಖರ್ಚುಗಳನ್ನು ತಾವೇ ವಹಿಸಿಕೊಳ್ಳಬೇಕಾಗುವುದು.
5) ಆಯ್ಕೆಯಾದಲ್ಲಿ ಖಾದಿಯಾನಿನಲ್ಲಿ ವಸತಿ ಸೌಕರ್ಯದ ಜವಾಬ್ದಾರಿ ಅಭ್ಯರ್ಥಿಯದ್ದಾಗಿರುತ್ತದೆ.
6) ಅಭ್ಯರ್ಥಿಯು ನಝೂರತ್ ದಿವಾನ್ ವತಿಯಿಂದ ಜಾರಿಯಾದ ಅರ್ಜಿ ನಮೂನೆಯೊಂದಿಗೆ. ಶೈಕ್ಷಣಿಕ ಅರ್ಹತಾ ಪ್ರಮಾಣಪತ್ರಗಳು, Experience Certificate, ಜನ್ಮ ದಿನಾಂಕದ ದೃಢೀಕರಣ ಪತ್ರ, ಆಧಾರ್ ಕಾರ್ಡ್, ವೋಟರ್ ಐ.ಡಿ., ಜಮಾಅತಿನ ಐ.ಡಿ ಕಾರ್ಡ್‌ಗಳ ದೃಢೀಕೃತ ಫೋಟೋ ಕಾಫಿ ಹಚ್ಚುವುದು ಅನಿವಾರ್ಯವಾಗಿರುತ್ತದೆ.
7) ಬದರ್ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಎರಡು ತಿಂಗಳ ನಂತರ ಪರೀಕ್ಷೆಯ ತಾರೀಖು ತಿಳಿಸಲಾಗುವುದು.
8) ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ತಮ್ಮ ಭರ್ತಿಗೊಂಡ ಅರ್ಜಿಯ ಮೇಲೆ ತಮ್ಮ ಜಿಲ್ಲಾ ಅಮೀರ್/ಸ್ಥಳೀಯ ಅಮೀರ್/ ಸದರ್/ ಸದರ್ ಲಜ್ನ/ ಮುಬಲ್ಲಿಗ್ ಇನ್‌ಚಾರ್ಜ್‌ರವರ ದೃಢೀಕೃತ ಸಹಿ ಹಾಗೂ ಮೊಹರಿನೊಂದಿಗೆ ಕಳುಹಿಸತಕ್ಕದ್ದು.
9) ಅಭ್ಯರ್ಥಿಯು ಸಂದರ್ಶನಕ್ಕೆ ಬರುವಾಗ ತಮ್ಮ Original, (ಅಸಲು) ಪ್ರಮಾಣಪತ್ರಗಳನ್ನು ಅವಶ್ಯವಾಗಿ ಜೊತೆಯಲ್ಲಿ ತರಬೇಕು.
10) ಅಭ್ಯರ್ಥಿಯು ವಕ್ಫೆನೌ ಆಗಿದ್ದಲ್ಲಿ ಸದರ್ ಅಂಜುಮನ್ ಅಹ್ಮದಿಯಾದ ಯಾವುದೆ ಹುದ್ದೆಗೆ ಅರ್ಜಿ ಸಲ್ಲಿಸುವುದಾದರೆ ಮುಂಚಿತವಾಗಿ ಸಯ್ಯದನಾ ಹುಝೂರ್ ಅನ್ವರ್‌ರವರಿಂದ ಮಂಜೂರಿ ಪಡೆದ ಪತ್ರದ ನಕಲು ಪ್ರತಿ ಲಗತ್ತಿಸುವುದು ಅನಿವಾರ್ಯವಾಗಿರುತ್ತದೆ.
11) ಹುದ್ದೆಗೆ ಸಂಬಂಧಿಸಿದ ಅರ್ಜಿಯನ್ನು ನಝೂರತ್ ದೀವಾನ್‌ನಿಂದ ಪಡೆಯಬಹುದಾಗಿದೆ. ಅರ್ಜಿ ಭರ್ತಿ ಮಾಡಿ ಕೊಟ್ಟ ನಂತರ ಕಾಯಿದೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತಹರೀಕ್ ಜದೀದ್, ಅಂಜುಮನ್ ವಖ್ಫ್ ಜದೀದ್ ಖಾದಿಯಾನಿನ ಸಂಸ್ಥೆಗಳಲ್ಲಿ ನಾಲ್ಕನೆ ದರ್ಜೆಯ ಹುದ್ದೆಗೆ ಸಂಬಂಧಿಸಿದ ವಿಭಾಗದಲ್ಲಿ ಉದ್ಯಾನಪಾಲಕ (ಮಾಲಿ), Care taker, ಅಡುಗೆ ಭಟ್ಟ (ಬಾವರ್ಚಿ) ನಾನ್ ಬಾಯ್ (ರೊಟ್ಟಿ ಮಾಡುವವ), ಖಾದಿವ್ ಮಸ್ಜಿದ್ (ಮಸೀದಿ ಸೇವಕ) ಹುದ್ದೆಗಳನ್ನು ತುಂಬಬೇಕಾಗಿದೆ.**

ಸೇವೆ ಸಲ್ಲಿಸ ಬಯಸುವ ಅಭ್ಯಥಿಗಳು ಕೆಳಗೆ ನಮೂದಿಸಿದ ಶರತ್ತಿನೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ಮೇಲ್ಕಾಣಿಸಿದ ಯಾವುದೇ ಹುದ್ದೆ ಪಡೆದಲ್ಲಿ ಖಾದಿಯಾನ್ ಅಥವಾ ಖಾದಿಯಾನಿನ ಹೊರ ವಲಯದ ಎಲ್ಲಿಯಾದರೂ ನಿಯುಕ್ತಗೊಳಿಸಬಹುದಾಗಿದೆ.

**ಶರತ್ತುಗಳು:**

1) ಅಭ್ಯರ್ಥಿಗೆ ಯಾವುದೇ ಶೈಕ್ಷಣಿಕ ಶರತ್ತು ಇರುವುದಿಲ್ಲ.
2) ಅಭ್ಯರ್ಥಿಯ ವಯಸ್ಸು 23 ವರ್ಷಗಳಿಗಿಂತ ಕಡಿಮೆ ಇರುವುದು ಅವಶ್ಯವಾಗಿದೆ.
3. ಜನನ ದೃಢೀಕರಣ ಪತ್ರ (Birth certificate) ಪ್ರಸ್ತುತಪಡಿಸುವುದು ಅನಿವಾರ್ಯವಾಗಿದೆ.
4) ಕೇಂದ್ರ ಆಯ್ಕೆ ಸಮಿತಿಯಿಂದ ನಡೆಸುವ ಸಂದರ್ಶನದಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ಅರ್ಹರೆಂದು ಪರಿಗಣಿಸಲಾಗುವುದು.
5) ನೂರ್ ಹಾಸ್ಪಿಟಲ್ ಖಾದಿಯಾನ್‌ನ ಮೆಡಿಕಲ್ ಬೋರ್ಡಿನಿಂದ ದೊರೆತ ಆರೋಗ್ಯ ವರದಿಯ ಆದಾರದಲ್ಲಿ ಅಭ್ಯರ್ಥಿಯನ್ನು ಸೇವೆಗೆ ಸ್ವೀಕರಿಸಲಾಗುವುದು.
6) ಅಭ್ಯರ್ಥಿಯು ಖಾದಿಯಾನಿಗೆ ಆಗಮಿಸುವ ಹಾಗೂ ನಿರ್ಗಮಿಸುವ ಖರ್ಚು ಸ್ವತಹಃ ನೋಡಿಕೊಳ್ಳುವುದು.
7) ಯಾವುದೇ ಅಭ್ಯರ್ಥಿ ಆಯ್ಕೆಯಾದಲ್ಲಿ ಖಾದಿಯಾನಿನಲ್ಲಿ ತನ್ನ ವಸತಿ ವ್ಯವಸ್ಥೆ ಸ್ವಯಂ ಮಾಡಿಕೊಳ್ಳಬೇಕಾಗುತ್ತದೆ.
8) ಆಸಕ್ತಿಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನಿಂದ ಪಡೆಯಬಹುದಾಗಿದೆ.

ಈ ಜಾಹಿರಾತಿನ ಎರಡು ತಿಂಗಳ ಒಳಗೆ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುವುದು **(ನಾಝಿರ್ ದೀವಾನ್ ಖಾದಿಯಾನ್)**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್**

**email: diwan@qadian.in**

**ದೂರವಾಣಿ ಸಂಖ್ಯೆಗಳು : ಕಚ್ಛೆರಿ: 01872–501130, ಮೊಬೈಲ್: 9646351280, 9877138347**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Vol No.1 Thursday, 16 July 2020 Issue No. 27

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**ಹುಝೂರ್ ಅನ್ವರ್(ಅಬಿಅ) ರವರ ಯೂರೋಪ್ ಪ್ರವಾಸವು (ಸೆಪ್ಟೆಂಬರ್, ಅಕ್ಟೋಬರ್ 2019) ಹಿಂದಿನ ಸಂಚಿಕೆಯಲ್ಲಿ ಮುಕ್ತಾಯವಾಗಿರುತ್ತದೆ ಅಲ್‌ಹಮ್ದುಲಿಲ್ಲಾಹ್. ಇಲ್ಲಿಯ ತನಕ ಯಾವುದೇ ಹೊಸ ವರದಿಗಳು ಕೈ ಸೇರಿಲ್ಲ. ಹಿಂದಿನ ಪ್ರಕಟವಾಗದ ವರದಿಗಳನ್ನು ಈಗ ಪ್ರಕಟಿಸಲಾಗುವುದು. ಹೊಸ ವರದಿಗಳು ದೊರಕಿದರೆ ಈ ವರದಿಗಳನ್ನು ತಡೆಹಿಡಿದು ಹೊಸ ವರದಿಗಳನ್ನು ಪ್ರಕಟಿಸಲಾಗುವುದು. ಈ ಸಂಚಿಕೆಯಿಂದ 2015 ನೇ ವರ್ಷದ ವರದಿ ಪ್ರಕಟಿಸಲಾಗುತ್ತದೆ.**

### 23ನೇ ಮೇ ಶನಿವಾರ 2015

ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅಬಿಅ) ಜರ್ಮನಿ ಪ್ರವಾಸ ಹೊರಡಲು ಮುಂಜಾನೆ 10 ಗಂಟೆಗೆ ವಸತಿ ನಿಲಯದಿಂದ ಹೊರಗೆ ಬಂದರು. ತಮ್ಮ ಪ್ರೀತಿಯ ಇಮಾಮರಿಗೆ ವಿದಾಯ ಕೋರಲು ಮುಂಜಾನೆಯಿಂದಲೇ ಜಮಾಅತ್‌ನ ಸ್ತ್ರೀ, ಪುರುಷರು ಮಸ್ಜಿದ್ ಬೈತುಲ್ ಫಝ್ಲ್ ಲಂಡನ್ ಹೊರಾಂಗಣದಲ್ಲಿ ಬಂದು ಸೇರಿದ್ದರು.

ಹುಝೂರ್ ಅನ್ವರ್(ಅಬಿಅ) ಕೆಲ ಸಮಯ ಜಮಾಅತ್ ಬಾಂಧವರ ನಡುವೆ ಉಪಸ್ಥಿತರಿದ್ದರು. ಪ್ರತಿಯೊಬ್ಬರು ತಮ್ಮ ಪ್ರಿಯ ಇಮಾಮರ ದರ್ಶನ ಮತ್ತು ಭೇಟಿಯ ಭಾಗ್ಯ ಪಡೆದರು.

ಹುಝೂರ್ ದುಆ ಮಾಡಿಸಿದರು. ಅನಂತರ ನಾಲ್ಕು ವಾಹನದಲ್ಲಿ ತಂಡವು ಬ್ರಿಟಾನಿಯಾದ ಒಂದು ಕರಾವಳಿ ನಗರವಾದ dover ನತ್ತ ಪ್ರಯಾಣಿಸಿದರು.

Dover ಹಡಗು ನಿಲ್ದಾಣವು ಬ್ರಿಟಾನಿಯಾದ ಸುಪ್ರಸಿದ್ಧ ಬಂದರುಗಳಲ್ಲಿ ಒಂದಾಗಿದೆ. ಲಂಡನ್ ಮತ್ತು ಅದರ ಅಕ್ಕಪಕ್ಕಗಳ ಕ್ಷೇತ್ರದ ಜನರ ಯೂರೋಪ್ ಪ್ರವಾಸವು ಫ್ರಾನ್ಸ್‌ನ ಮೂಲಕ ಈ ಬಂದರಿನಿಂದಲೇ ಪ್ರಾರಂಭವಾಗುತ್ತದೆ.

Dover ನಿಂದ 11 ಮೈಲು ಮೊದಲೆ ಆ ಪ್ರಸಿದ್ಧ Channel Tunnel ಬರುತ್ತದೆ. ಅದು ಸಮುದ್ರ ಒಳಗಡೆಯಿಂದ ಬ್ರಿಟಾನಿಯಾ ಮತ್ತು ಫ್ರಾನ್ಸ್ ಕರಾವಳಿ ಕ್ಷೇತ್ರಗಳನ್ನು ಪರಸ್ಪರ ಜೋಡಿಸುತ್ತವೆ. ಆ ಸುರಂಗದ ಮೂಲಕ ಕಾರುಗಳು ಮತ್ತು ಇತರ ವಾಹನಗಳು ರೈಲುಗಳ ಮೂಲಕ ಫ್ರಾನ್ಸ್‌ನ ನಗರ Calais ವರೆಗೆ ತಲುಪುತ್ತದೆ. ಇಂದು ಅದೇ Channel Tunnel ಮೂಲಕವೇ ಆ ತಂಡದ ಪ್ರವಾಸ ಯೋಜನೆ ಆಗಿತ್ತು.

ಲಂಡನ್‌ನಿಂದ ಮುಕರ್ರಮ್ ರಫೀಕ್ ಹಯಾತ್ ಸಾಹಿಬ್ ಅಮೀರ್ ಜಮಾಅತ್ ಅಹ್ಮದಿಯಾ ಯು.ಕೆ., ಮುಕರ್ರಮ್ ಅತಾವುಲ್ ಮುಜೀಬ್ ರಾಶಿದ್ ಸಾಹಿಬ್ ನಾಯಬ್ ಅಮಿರ್ ಹಾಗೂ ಮುಬಲ್ಲಿಗ್ Incharge U.K., ಮುಕರ್ರಮ್ ವಸೀಮ್ ಅಹ್ಮದ್ ಚೌಧರಿ ಸಾಹಿಬ್, ಮುಕರ್ರಮ್ ನಾಸಿರ್ ಇನ್‌ಆಮ್ ಸಹಿಬ್ ಪ್ರಾಂಶುಪಾಲರು ಜಾಮಿಯಾ ಅಹ್ಮದಿಯಾ, ಮುಕರ್ರಮ್ ಝುಹೂರ್ ಅಹ್ಮದ್ ಸಾಹಿಬ್ (ಹಿಫಾಝುತೆ ಖಾಸ್ ವೇಲಧಿಕಾರಿ), ಮುಕರ್ರಮ್ ಮೇಜರ್ ಸಾಹಿಬ್ (ಮುಹತಮಿಮ್ ಉಮೂಮಿ) ಖುದ್ದಾಮರ ರಕ್ಷಣಾ ತಂಡದೊಂದಿಗೆ ಹುಝೂರ್‌ರನ್ನು ಬೀಳ್ಕೊಡಲು Channel Tunnel ವರೆಗೆ ಆಗಮಿಸಿದ್ದರು.

ಸುಮಾರು ಒಂದು ಗಂಟೆ 35 ನಿಮಿಷದ ಪ್ರಯಾಣ ನಂತರ 11 ಗಂಟೆ 40 ನಿಮಿಷಕ್ಕೆ Channel Tunnel ತಲುಪಿದರು. ಅನಂತರ ಇಮಿಗ್ರೇಶನ್ ಕಾರ್ಯ ಮತ್ತು ಇತರ ಪ್ರಯಾಣ ಕಾರ್ಯಗಳನ್ನು ಮುಗಿಸಿಕೊಂಡು ಹುಝೂರ್ Channel Tunnel Parking ಭಾಗದೆಡೆ ಆಗಮಿಸಿದರು.

12 ಗಂಟೆ 35 ನಿಮಿಷಕ್ಕೆ ವಾಹನಗಳನ್ನು ರೈಲಿನೊಳಗೆ ಇರಿಸಲಾಯಿತು. ಈ ರೈಲು ಎರಡು ಅಂತಸ್ತನ್ನು ಒಳಗೊಂಡಿದೆ. ಅದರೊಳಗೆ ಏಕಕಾಲದಲ್ಲಿ 180 ಕಾರುಗಳನ್ನು ಪ್ರಯಾಣಿಕರ ಸಮೇತ ನಿಲುಗಡೆ ಮಾಡಬಹುದಾಗಿದೆ.

ರೈಲು 12 ಗಂಟೆ 50 ನಿಮಿಷಕ್ಕೆ, 140 ಕಿ.ಮೀ ಪ್ರತಿ ಗಂಟೆಯ ವೇಗದಲ್ಲಿ ಫ್ರಾನ್ಸ್‌ನ ಕರಾವಳಿ ನಗರ Calais ಕಡೆ ಪ್ರಯಾಣಿಸಿತು. ಆ ಸುರಂಗದ ಉದ್ದವು ಸುಮಾರು 81 ಮೈಲುಗಳಿವೆ. ಅದರಲ್ಲಿ 24 ಮೈಲುಗಳಷ್ಟು ಭಾಗ ಸಮುದ್ರದ ಒಳಗಡೆಯಿಂದಿದೆ.

ಆ ಸುರಂಗದ (Tunnel ) ಆಳವಾದ ಭಾಗ ಸಮುದ್ರ ಮಟ್ಟದಿಂದ 75 ಮೀಟರ್ ಅಂದರೆ 250 ಫೀಟ್ ಒಳಗಡೆ ಇದೆ. ಇಲ್ಲಿಯವರೆಗೆ ಸಮುದ್ರ ಕೆಳಭಾಗದಲ್ಲಿ ನಿರ್ಮಿಸಲ್ಪಟ್ಟ ಸುರಂಗ (Tunnel) ಗಳಲ್ಲಿ ಇದು ಲೋಕದ ಅತ್ಯಂತ ದೊಡ್ಡ Tunnel ಆಗಿದೆ.

12 ಗಂಟೆ 50 ನಿಮಿಷಕ್ಕೆ ರೈಲು ಹೊರಟಿತು. ಸುಮಾರು ಅರ್ಧ ಗಂಟೆ ಪ್ರಯಾಣ ನಂತರ ಫ್ರಾನ್ಸ್‌ನ ಸ್ಥಳಿಯ ಸಮಯ 2 ಗಂಟೆ 20 ನಿಮಿಷಕ್ಕೆ ಫ್ರಾನ್ಸ್‌ನ Calais ನಗರಕ್ಕೆ ತಲುಪಿತು. (ಫ್ರಾನ್ಸ್‌ನ ಸಮಯವು ಬ್ರಿಟನ್‌ನ ಸಮಯಕ್ಕಿಂತ ಒಂದು ಗಂಟೆ ಮುಂದಿದೆ). ರೈಲು ನಿಂತ ಸುಮಾರು ಐದು ನಿಮಿಷದ ನಂತರ ವಾಹನಗಳನ್ನು ರೈಲಿನಿಂದ ಹೊರಗೆ ತರಲಾಯಿತು ಮತ್ತು ವಾಹನದ ಪ್ರಯಾಣವನ್ನು ರಸ್ತೆಯಲ್ಲಿ ಆರಂಭಿಸಲಾಯಿತು.

ಮೊದಲೆ ನಿಶ್ಚಯಿಸಲ್ಪಟ್ಟ ಕಾರ್ಯಕ್ರಮದನ್ವಯ ಇಲ್ಲಿಂದ ಕೆಲವು ಕಿ.ಮೀ ದೂರದಲ್ಲಿರುವ ಒಂದು ಪೆಟ್ರೋಲ್ ಬಂಕ್ ಪಾರ್ಕಿಂಗ್ ಏರಿಯಾದಲ್ಲಿ ಜರ್ಮನಿ ಜಮಾಅತಿನಿಂದ ಬಂದ ತಂಡವು ಹುಝೂರರಿಗೆ ಸ್ವಾಗತ ಕೋರಲಿಕ್ಕಿದ್ದರು. ಅದೇ ಕ್ಷೇತ್ರದ ಒಂದು ರೆಸ್ಟೋರೆಂಟ್‌ನಲಿ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಿದ್ದರು.

ಪಾರ್ಕಿಂಗ್ ಏರಿಯಾದಲ್ಲಿ ಹುಝೂರರ ವಾಹನ ಬರುತ್ತಿದ್ದಂತೆಯೇ ಮುಕರ್ರಮ್ ಅಬ್ದುಲ್ಲ ವಾಗಸ್ ಹುಝೂರ್ ಸಾಹಿಬ್ ಅಮೀರ್ ಜಮಾಅತ್ ಜರ್ಮನಿ, ಮುಕರ್ರಮ್ ಹೈದರ್ ಅಲಿ ಝುಫರ್ ಸಾಹಿಬ್ ಮುಬಲ್ಲಿಗ್ incharge ಜರ್ಮನಿ, ಮುಕರ್ರಮ್ ಮುಹಮ್ಮದ್ ಇಲ್ಯಾಸ್ ಮಜೂಕ ಸಾಹಿಬ್ ಜನರಲ್ ಸೆಕ್ರಟರಿ ಹಾಗೂ ಅಫ್ಸರ್ ಜಲ್ಸ ಸಾಲಾನ ಜರ್ಮನಿ, ಮುಕರ್ರಮ್ ಜರಿಯುಲ್ಲಾಹ್ ಸಾಹಿಬ್ ಮುಬಲ್ಲಿಗ್ ಮುಕರ್ರಮ್ ಯಹ್ಯಾ ಝಾಹಿದ್ ಸಾಹಿಬ್ ಅಸಿಸ್ಟೆಂಟ್ ಜನರಲ್ ಸೆಕ್ರಟರಿ, ಮುಕರ್ರಮ್ ಹಸನಾತ್ ಅಹ್ಮದ್ ಸಾಹಿಬ್ ಅಸಿಸ್ಟೆಂಟ್ ಜನರಲ್ ಸೆಕ್ರೆಟರಿ, ಮುಕರ್ರಮ್ ಹೊಸನಾತ್ ಅಹ್ಮದ್ ಸಾಹಿಬ್ ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿ, ಮುಕರ್ರಮ್ ಡಾ॥ ಅತ್‌ಹರ್ ಝುಬೇರ್ ಸಹಿಬ್, ಮುಕರ್ರಮ್ ಅಬ್ದುಲ್ಲಾ ಸಪ್ರಾ ಸಾಹಿಬ್ ಮತ್ತು ಮುಕರ್ರವ್ ಫೈರ್ಝಾನ್ ಅಹ್ಮದ್ ಸಾಹಿಬ್ incharge ಹಿಫಾಝುತ್‌ಖಾಸ್ ಅವರು ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಿದರು ಹಾಗೂ ಶುಭಾಗಮನ ಕೋರಿದರು.

ಇಲ್ಲಿಂದ ಉಟೋಪಾಚಾರದಿಂದ ಬಿಡುವು ಪಡೆದ ನಂತರ 3 ಗಂಟೆ 45 ನಿಮಿಷಕ್ಕೆ ಬೆಲ್ಜಿಯಂ ಮತ್ತು ಜರ್ಮನಿಯ ಗಡಿಯಲ್ಲಿ ಇರುವ Aachen ನಗರಕ್ಕೆ ಪ್ರಯಾಣಿಸಿದರು. ಇಂದು ಫ್ರೆಂಕ್‌ಫಟ್ ಹೋಗುವ ಮಾರ್ಗದಲ್ಲಿ ನಿಂತು ನಿರ್ಮಾಣವಾಗುತ್ತಿರುವ ಮಸೀದಿ "ಮಸ್ಜಿದ್ ಮನ್ಸೂರ್" ನ ಉದ್ಘಾಟನೆ ಮಾಡುವ ಕಾರ್ಯಕ್ರಮವಿತ್ತು.

ಇಲ್ಲಿ calais ನಿಂದ Aachen ನಗರದ ದೂರ 347 ಕಿ.ಮೀ ಇದೆ. 55 ಕಿ.ಮೀ ಪ್ರಯಾಣದ ನಂತರ ಫ್ರಾನ್ಸ್‌ನ ಗಡಿದಾಟಿ ಬೆಲ್ಜಿಯಂ ದೇಶ ಪ್ರವೇಶ ಮಾಡಿದರು ಇನ್ನು 278 ಕಿ.ಮೀ ಪ್ರಯಾಣದ ನಂತರ ಆರು ಕಾಲು ಗಂಟೆಗೆ ಬೆಲ್ಜಿಯಂ ಗಡಿದಾಟಿ ಜರ್ಮನಿ ಗಡಿ ಪ್ರವೇಶ ಮಾಡಿದರು. ಇಲ್ಲಿಂದ ಹತ್ತು ನಿಮಿಷದ ಪ್ರಯಾಣ ನಂತರ Aachen ನಗರ ಬರುತ್ತದೆ. ಇಲ್ಲಿ ಮೊದಲೇ ನಿಯೋಜಿತ ಕಾರ್ಯಕ್ರಮದನ್ವಯ ಹುಝೂರ್ ಕೆಲ ಸಮಯಕ್ಕಾಗಿ ಮುಕರ್ರಮ್ ಸಿದ್ದೀಖ್ ಅಹ್ಮದ್ ಡೋಗರ್ ಸಾಹಿಬ್ ಅವರ ಮನೆಗೆ ಆಗಮಿಸಿದರು ಸಿದ್ದೀಖ್ ಅಹ್ಮದ್ ಡೋಗರ್ ಸಾಹಿಬ್ ಜಮಾಅತಿನ ನಿಷ್ಠಾವಂತ ಹಾಗೂ

*(ಉಳಿದ ವರದಿ ಪುಟ ಸಂಖೆ 08 ರಲ್ಲಿ ಓದಿರಿ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.